It is this Papa and Punya that determine our next birth, in what religion, which family and what circumstances. The also determine broadly his nature, character and the major events of life. In higher animals these events of life are fully predetermined and cannot be changed; but for man there is considerable amount of freedom to alter and change the course of his future life by present actions. Papa and Punya stay separate, the former bring about pain and suffering; and the latter joy and happiness alternately. They are the two sides of the same coin called "life on earth". Day and night, light and dark, summer and winter, pain and pleasure, young and old, male and female, birth and death are but a few examples of inevitable pairs of opposites besetting the life on earth. Every soul born here, must experience them without exception, though in varying degrees, depending upon the intensity of Karma (Papa and Punya). Even the great Avatars are no exception.

शरीरं यदवाप्नोति यच्चप्युत्क्रामतीश्वरः ।
गृही त्वैतानि संयाति वायुर्गन्धानिवाशयात् ।। (गीता)

Just as the wind picks up the smell of the place over which it blows, so does the soul pick up the fruits of his actions (Karma) from the old body and enters the new body. Or even as a man leaving on old tenanted house picks up his belongings and goes to a new house, the soul at the time of death takes his accumulated Karma and enters the new body. The man changing the house does take the trouble of collecting and carrying his belongings, but the soul has to make no effort to collect his Karma, they automatically follow him, because they are the integral part of his being, like the weight of an obese man is part of his body. He cannot cast it off or leave behind even if he wants to. The baggage of subtle Karma is invisible to physical eyes, and indetectable by the most sophisticated instruments of the scientist, but is an indelible impressions in your heart.

CC-O. In Public Domain. Digitized by eGangotri

So Karma, and Janma based on Karma as propounded by Veda, do exist and everyone has to suffer inescapably for his Karma, sooner or later. If your religion or belief does not recognise it, that is no excuse and no escape. Your beliefs are worthless and inconsequential before the flawless universal law. Truth prevails and Dharma triumphs.

नहि द्रष्टुः दृष्टे र्विपरिलोपो विद्यते (बु. उप.)

The sight of Omniscient never fails. There is no place and time where His sight is absent. Human eye and human law may fail to detect your sins and punish, but the Omniscient eyes will never miss anything. His eyes are not limited by time, space or objects. They are wide open and watchfull all the time and everywhere. God does not keep the record of your deeds somewhere away in another place called heaven. Everything will be recorded in your own heart and you yourself are the witness and you alone have to suffer for your sins inevitably.

The modern man overwhelmed by material sciences, astounding technologies, political passions, cut-throat competition, media brain-washing and hypocritical holymen, has lost all allegience to the sanathana (eternal) Dharma and has become a non-believer or agnostic. He thinks there is no soul other than the body and wants to enjoy life by immoral heinous means. In youth he enjoys life by hook and crook without inhibitions thinking that nobody will oversee him. If he does not make hay while the sun shines in youth, he will never get another chance, he thinks, this being his only chance to enjoy. Thus he commits only sins and enjoys the maximum. But his enjoyment will soon become suffering, because day must be followed by night.

माकुर० धन जन यौवन म गर्वम्। हरति निमेषात्कालः सर्वम्।

Don't be proud of your wealth, man-power and youth, everything will be robbed away by time - says Bhagavan Shankaracharya.

CC-O. In Public Domain. Digitized by eGangotri

Time will change everything and exciting enjoyment will change to an intense suffering. Not only he suffers now, here in this life, but also many lives in future. Even the most powerful man on earth having the absolute, unobstructed power to do anything he wishes, cannot survive the test of time. Time will devour everything and he will be a helpless worm crawling and feeding on filth very soon. Therefore, the modern materialistic man, should heed to the wisdom of our ancient Rishis and live a righteous, moral and ethical life. Have full faith and devotion to God and that alone can give happiness, peace and prosperity here and hereafter.

(- to be continued)

* * *

Man is born alone and he dies alone. He has not a real single companion on his march through this incident called life. The spouse, the father, the mother, sons, kinsmen, friends all turn away from your body and go about their work. Only Dharma follows the body. That is the only enduring friend of man and the only thing he should seek.

- Bishma to Pandavas before breathing his last

CC-O. In Public Domain. Digitized by eGangotri

– ಸ್ವಾಮಿ ವಿರಾಜೇಶ್ವರ

ಸೋಽಹಂ ಅಂದರೆ ಅವನು ನಾನು. ಸೋಹಂ ಎಂಬುದನ್ನು ಹಿಂದು ಮುಂದು ಮಾಡಿದಾಗ ಅಹಂಸಃ ಎಂದಾಗುವುದು. ಅಹಂಸಃ ಎಂಬ ಶಬ್ದವೇ ಮೊದಲಿನ ಅಕಾರವು ಲೋಪವಾಗಿ ಹಂಸಃ ಎಂದಾಗುತ್ತದೆ. ನಾನು ಅವನಾಗಿದ್ದೇನೆ ಎಂದರ್ಥ. ಅವನು ಎಂಬ ಪದಕ್ಕೆ ಪರಮಾತ್ಮ ಎಂಬ ಅರ್ಥ ಬಳಸಿ. ನಾನು ಪರಮಾತ್ಮನಾಗಿದ್ದೇನೆ ಎಂಬ ತಾತ್ಪರ್ಯ. ಹಂಸ ಪದವು ವಕ್ತಾನ ಪರಮಾತ್ಮನಲ್ಲಿ ತಾದಾತ್ಮ್ಯವನ್ನು ತೋರಿಸಿಕೊಡುತ್ತದೆ. ನಾನು ಪರಮಾತ್ಮನಾಗಿದ್ದೇನೆ ಎಂದು ಸಂಕುಚಿತ ಭಾವನೆಯಿಂದ ಹೇಳಿದರೆ ಅದು ದುರಭಿಮಾನ ಅಥವಾ ದುರಹಂಕಾರವಾದೀತು. ಹೇಳುವವನು ನಿರಹಂಕಾರವಾಗಿ ಹೇಳಿದರೂ, ಕೇಳುವವನಿಗೆ ಅದು ದುರಹಂಕಾರದ ವಚನವಾಗಿ ತೋರಬಹುದು. ಅ ಹಂಸಃ ನಾನು ಅವನಾಗಿದ್ದೇನೆ ಎಂಬಲ್ಲಿ "ಅವನು" ಶಬ್ದವನ್ನು ಪ್ರಥಮ ಪುರುಷ (third person) ಸರ್ವನಾಮ "ಅವನು" ಎಂದು ತಿಳಿದುಕೊಳ್ಳಬೇಕು. ನನ್ನಿಂದ ಬೇರೆಯಾಗಿದ್ದವನು ಅವನು ಎಂಬ ಸರ್ವನಾಮದಿಂದ ಸಂಬೊಧಿಸಲ್ಪಡುತ್ತಾನೆ. ಅಂದರೆ ಪ್ರತಿಯೊಂದು ಜೀವನು "ಅವನು" ಅಲ್ಲವೆ ? ತನಗಿಂತ ಭಿನ್ನವಾಗಿ ಕಾಣುವ ಎಲ್ಲವೂ "ಅವನು" ಎಂಬ ಶಬ್ದದಲ್ಲಿ ಸೇರಿತು. ನಾನೇ ಅವನು, ನಾನೇ ಅವಳು ನಾನೇ ಅದು, ನಾನೇ ಇವನು, ಇವಳು, ಇದು. ಎಲ್ಲವೂ "ನಾನೇ". ಎಲ್ಲದರಲ್ಲಿಯೂ ಇರುವವನು ಒಬ್ಬನೇ ಅವನನ್ನೇ "ನಾನು" ಎಂದು ಹೇಳಿದಂತಾಯಿತು. ಇದನ್ನೇ ಈಶಾವಾಸ್ಯೋಪನಿಷತ್ತಿನಲ್ಲಿ 'ಯೋಽಸಾವಸೌಪುರುಷಃ ಸೋಽಹಮಸ್ಮಿ' – ಆ ಸೂರ್ಯನಲ್ಲಿರುವ ಪುರುಷನು ನಾನಾಗಿದ್ದೇನೆ ಎಂದು ಉಪಾಸಕನು ತಾದಾತ್ಮ್ಯ ಭಾವದಿಂದ ಹೇಳುತ್ತಾನೆ.

ಪ್ರತಿಯೊಂದು ವಸ್ತುವೂ ಕಣ್ಣಿಗೆ ಬೇರೆ ಬೇರೆಯಾಗಿ ಕಂಡು ಬಂದರೂ, ಅವುಗಳೊಳಗೆ ಅಗೋಚರವಾಗಿ, ಅಂತರ್ಯಾಮಿಯಾಗಿ ಇರುವಾತನು ಒಬ್ಬನೇ. ಬೇರೆ ಬೇರೆಯಾಗಿ ಕಂಡುಬರುವುದು ಮನಸ್ಸಿನ ಅಜ್ಞಾನದಿಂದ ಮತ್ತು ಇಂದ್ರಿಯಗಳ ದೋಷದಿಂದ.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಲಿಲ್ಲವೇ ?

ಈಶ್ವರಃ ಸರ್ವಭೂತಾನಾಂ ಹೃದ್ದೇಶೇ ತಿಷ್ಠತಿ.

ಈಶ್ವರನು ಎಲ್ಲಾ ಪ್ರಾಣಿಗಳ ಹೃದಯದಲ್ಲಿರುತ್ತಾನೆ.

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ

Sri Vidyabharathi Book Centre, Sringeri

CC-0. Jangamwadi Math Collection. Digitized by eGangotri

ನಾನು ಪ್ರತಿಯೊಬ್ಬ ಪ್ರಾಣಿಗಳ ದೇಹದಲ್ಲಿ ಆಶ್ರಯನಾಗಿದ್ದೇನೆ.

ಮಯಾ ತತಮಿದಂ ಸರ್ವಂ ಜಗತ್

ಈ ಜಗತ್ತೆಲ್ಲವೂ ನನ್ನಿಂದ ವ್ಯಾಪಿಸಲ್ಪಟ್ಟಿದೆ.

ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಂ

ಎಲ್ಲಾ ಭೂತಗಳಲ್ಲಿ ಸಮಾನವಾಗಿ ಇರುವ ಪರಮೇಶ್ವರನನ್ನು....

ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟ

ಎಲ್ಲದರ ಹೃದಯದಲ್ಲಿ ನಾನೇ ಇರುವವನು.

ಇನ್ನೂ ಅನೇಕ ವಿಧವಾಗಿ ಎಲ್ಲಾ ಶಾಸ್ತ್ರಗಳಲ್ಲಿಯೂ "ಪರಮಾತ್ಮನೇ ಎಲ್ಲೆಲ್ಲಿಯೂ ಇರುತ್ತಾನೆ ಎಂದು ಹೇಳಲ್ಪಟ್ಟಿದೆ.

ಎಲ್ಲದರಲ್ಲಿಯೂ ತಾನೇ ಇರುವುದೆಂದು ಅರಿವು ಆದಾಗ, ತನ್ನಲ್ಲಿ ಮತ್ತೊಬ್ಬನು ಎಷ್ಟು ಪ್ರೀತಿ, ಅನುಕಂಪಗಳಿಂದ ವರ್ತಿಸಬೇಕೋ ಅಷ್ಟೇ ಪ್ರೀತಿ ಅನುಕಂಪಗಳಿಂದ ತಾನು ಅವರಲ್ಲಿ ವರ್ತಿಸಬೇಕೆಂದು ಸಿದ್ಧವಾಗುವುದು. ಆವಾಗ "ನಾನು ಪರಮಾತ್ಮನು" ಎಂಬ ದುರಹಂಕಾರ ಹೋಗಿ ಪ್ರತಿಯೊಂದು ಪ್ರಾಣಿಯಲ್ಲಿಯೂ, ಪ್ರೀತಿ, ಸಹಾನುಭೂತಿ ಉಂಟಾಗಿ, ಸರ್ವಭೂತಗಳ ಹಿತವನ್ನು ಬಯಸುತ್ತಾನೆ. (ಸರ್ವಭೂತಹಿತೀರತಾಃ) 'ನಾನು ಬ್ರಹ್ಮನಾಗಿದ್ದೇನೆ' ಎಂದರೆ, ಪ್ರತಿ ಪ್ರಾಣಿಯ ಹೃದಯದಲ್ಲಿ ವಾಸವಾಗಿರುವ ಈಶ್ವರನು ನನ್ನ ಹೃದಯದಲ್ಲಿರುವವನೇ ಆಗಿದ್ದಾನೆ ಎಂದರ್ಥವಲ್ಲದೆ, ಎಲ್ಲಿಯೋ ಸ್ವರ್ಗಲೋಕದಲ್ಲಿ ಕೂತಿರುವ ಪರಮಾತ್ಮನು ನಾನು ಎಂಬ ಅರ್ಥವಲ್ಲ.

ಸಾಮಾನ್ಯವಾಗಿ ಮಾತನಾಡುವಾಗ "ಅಹಂ" "ನಾನು" ಎಂಬ ಶಬ್ದದಿಂದ ಯಾವುದನ್ನು ಉದ್ದೇಶಿಸಿ ಹೇಳುತ್ತೇವೋ ಆ "ನಾನು" ಬೇರೆ. ವ್ಯವಹಾರದಲ್ಲಿ ನಾನು, ನೀನು, ಅವನು ಎಂಬುದಾಗಿ, ಶರೀರ ಇಂದ್ರಿಯಗಳನ್ನುದ್ದೇಶಿಸಿ, ಸಂಕುಚಿತ ವ್ಯಕ್ತಿತ್ವ ಭಾವದಿಂದ ಹೇಳುತ್ತೇವೆ. ನಾನು ಹೋದೆನು, ಅವನು ಕೊಟ್ಟನು, ಅವನು ಹೇಳಿದನು ಎಂದು ಶರೀರವನ್ನೇ ನಿರ್ದೇಶಿಸಿ ಹೇಳುತ್ತೇವೆ. ಸ್ವಲ್ಪ ಹೆಚ್ಚು ಅರಿತವರು ನಾನು, ಅವನು ಎಂಬ ಶಬ್ದಗಳಿಂದ ಮನಸ್ಸು ಅಥವಾ ಅಂತಃಕರಣದ ಧರ್ಮವನ್ನುದ್ದೇಶಿಸಿ ಹೇಳಬಹುದು. ಆದರೆ ಸೋಹಂ, ಹಂಸಃ ಎಂಬ ಪದಗಳಿಂದ ನಿರ್ದೇಶಿಸಲ್ಪಡುವ "ಅಹಂ" ಇವುಗಳಾವುದೂ ಅಲ್ಲ. ಈ ಅಹಂ ಶರೀರ ಇಂದ್ರಿಯಗಳನ್ನು ಚೇತನಗೊಳಿಸುವ ತತ್ವವು. ಆ ಚೈತನ್ಯ ತತ್ವವು ಇದ್ದರೇನೇ ನಮ್ಮ ಶರೀರೇಂದ್ರಿಯಗಳು ಜೀವಂತವಾಗಿರುವವು. ಆವಾಗ "ನಾನು, ಅವನು" ಎಂದು ಹೇಳಲು ಶರೀರದಲ್ಲಿ ಶಕ್ತಿ ಇರುವದು. ಆ ಚೈತನ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲವೆಂದಾದರೆ ಶರೀರವು ಒಂದು ಕ್ಷಣದಲ್ಲಿ ಸತ್ತು ಕೊಳೆತು ಭಯಂಕರವಾಗಿ ಕಾಣುವದು. ಆ ಒಂದೇ ಚೈತನ್ಯವು ಎಲ್ಲಾ ಜೀವರಾಶಿಗಳಿಗೂ ಚೈತನ್ಯ ಕೊಟ್ಟು ಜೀವಂತವಾಗಿರಿಸುವುದು. ಎಲ್ಲಾ ಶರೀರಗಳಲ್ಲೂ "ನಾನು, ನಾನು" ಎಂದು ಹೇಳುವ ಅಹಂಕಾರವು ಆ ಚೈತನ್ಯದ ಶಕ್ತಿಯೇ ಅದನ್ನೇ ಸೋಹಂ, ಹಂಸಃ ಎಂದು ಇಲ್ಲಿ ಹೇಳಲ್ಪಟ್ಟಿದೆ.

ಆ ಚೈತನ್ಯವನ್ನೇ ಉದ್ದೇಶಿಸಿ ತತ್ವಜ್ಞಾನಿಗಳು ಸೋಹಂ, ಹಂಸಃ, ಅಹಂ ಬ್ರಹ್ಮಾಸ್ಮಿ ಎಂದು ಹೇಳುತ್ತಾರಲ್ಲದೆ, ಶರೀರವನ್ನುದ್ದೇಶಿಸಿ, ಸಂಕುಚಿತ ಭಾವನೆಯಿಂದ ಅಲ್ಲ. ಅವರಲ್ಲಿ ಸಾಮಾನ್ಯ ಪ್ರಾಣಿಗಳಲ್ಲಿರುವ ಎಲ್ಲಕ್ಕಿಂತಲೂ ಭಿನ್ನವಾದ ಈ ಶರೀರವು ನಾನು ಎಂಬ ಸಂಕುಚಿತ ಭಾವನೆ ಇರುವದಿಲ್ಲ. ಅವರು ವ್ಯಕ್ತಿತ್ವ ಭಾವನೆಯನ್ನು ನಾಶಮಾಡಿ, ಸರ್ವಾತ್ಮ, ಚೈತನ್ಯ ಭಾವನೆಯನ್ನು ಪಡೆದು ಎಲ್ಲದರಲ್ಲೂ ಪರಮಾತ್ಮ ಭಾವನೆಯನ್ನಿಟ್ಟುಕೊಂಡಿರುತ್ತಾರೆ. ಅದನ್ನೇ ಭಗವದ್ಗೀತೆಯಲ್ಲಿ ವಿದ್ಯಾವಿನಯಸಂಪನ್ನೇ, ಬ್ರಾಹ್ಮಣೇ ಗವಿ ಹಸ್ತಿನಿ / ಶುನಿಚೈವಶ್ವಪಾಕೇಚ ಪಂಡಿತಾಃ ಸಮದರ್ಶಿನಃ ॥ 5-18) ವಿದ್ವಾಂಸರಲ್ಲಿಯೂ, ಬ್ರಾಹ್ಮಣರಲ್ಲಿಯೂ, ಹಸುವಿನಲ್ಲೂ, ಆನೆಯಲ್ಲಿಯೂ, ನಾಯಿಯಲ್ಲಿಯೂ, ಚಾಂಡಾಲನಲ್ಲಿಯೂ ಪಂಡಿತರಾದವರು ಸಮದೃಷ್ಟಿಯುಳ್ಳವರಾಗಿರುತ್ತಾರೆ. ಒಂದೇ ಚೈತನ್ಯವನ್ನು ಎಲ್ಲದರಲ್ಲೂ ಕಾಣುತ್ತಾರೆ."

ಈ ನಾನು ಎಂಬ ಸಂಕುಚಿತ ಭಾವನೆಯ ವ್ಯಕ್ತಿಯು "ಅವನು" ಎಂಬ ಚೈತನ್ಯವು ಇಲ್ಲವಾದರೆ, ಇಲ್ಲವೇ ಇಲ್ಲವಾಗುವುದರಿಂದ "ನಾನು" ವು "ಅವನೇ" ಎಂದು ತಾದಾತ್ಮ್ಯ ಭಾವವನ್ನು ಪಡೆದಾಗ ತತ್ವವಿದರ ಎಲ್ಲಾ ಸಂಸಾರದ ಕಷ್ಟ, ಭಯಗಳನ್ನು ಆ ಚೈತನ್ಯವು ನಾಶಮಾಡಿ, ಅವರ ಶರೀರದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತದೆ. ಆದ್ದರಿಂದ ಅದು "ಹಂಸಃ" "ಹಂತಿ ಸಂಸಾರ ಭಯಮಿತಿ ಹಂಸಃ" ಹನ್ ಎಂಬ ಧಾತುವಿಗೆ ನಾಶ ಮಾಡುವುದು, ಕೊಲ್ಲುವುದೆಂಬ ಅರ್ಥವಿರುವುದರಿಂದ, ಹನ್ ಧಾತುವಿನಿಂದುಂಟಾದ ಹಂಸ ಶಬ್ದಕ್ಕೆ, ಸಂಸಾರ ಭಯವನ್ನು ನಾಶಮಾಡುವವನೆಂದರ್ಥವಾಗುತ್ತದೆ. ಸಂಸಾರ ಭಯವನ್ನು ನಾಶಮಾಡುವ ಸರ್ವಾಂತರ್ಯಾಮಿ ಪರಮಾತ್ಮನೇ ಹಂಸ. ಅವನನ್ನು ಸತತವಾಗಿ ಭಜಿಸಿ, ನಮ್ಮ ಸಂಕುಚಿತ ವ್ಯಕ್ತಿತ್ವ ಭಾವವನ್ನು ನಾಶಮಾಡಿದರೆ ನಾವು ಅವನಲ್ಲಿ ತಾದಾತ್ಮ್ಯ ಭಾವವನ್ನು ಪಡೆಯಬಹುದು. ಅದೇ ಹಂಸಯೋಗ; ಹಂಸನಲ್ಲಿ ತಾದಾತ್ಮ್ಯ ಭಾವವನ್ನು ಪಡೆಯುವುದು. ಅದು ಹಂಸ ಯೋಗದ ಉದ್ದೇಶ. ಆ ತಾದಾತ್ಮ್ಯ ಭಾವವನ್ನು ಪಡೆದಾಗ, ಸಂಕುಚಿತ "ನಾನು" ಶೂನ್ಯಾಗಿ, ಮಿಥ್ಯವಾಗುವುದು. ಉಳಿಯುವುದು "ಅವನು" ಒಬ್ಬನೇ ಅವನೇ ಸತ್ಯ. ಅದೇ ವೇದಾಂತದ ಪರಾಕಾಷ್ಠ.

* * *

Sri Vidyabharathi Book Centre, Sringeri

ಶಾಂಕರರು ಅದ್ವೈತ ಮತ್ತು ಮೋಕ್ಷ

CC-0. In Public Domain. Digitized by eGangotri

– ಗಣೇಶ ಆರ್. ಭಟ್, ಎಂ.ಎ.

ಜೀವನದಲ್ಲಿ ಪುರುಷಾರ್ಥಗಳ ಸಿದ್ಧಿಯು ಸರ್ವರ ಪರಮಧ್ಯೇಯವಾಗಿದೆ. ಪುರುಷಾರ್ಥಗಳಲ್ಲಿ ಧರ್ಮವು ಪ್ರಧಾನವಾಗಿದ್ದು ಜಗತ್ತಿನ ವ್ಯವಸ್ಥಿತವಾದ ನಡೆಗೆ ಅದರ ಆಚರಣೆ ಮತ್ತು ಸ್ಥಾಪನೆ ಬಹಳ ಮುಖ್ಯವಾಗಿದೆ. ಈ ಧರ್ಮದ ಸ್ಥಾಪನೆಗಾಗಿಯೇ ನಮ್ಮ ಹಿಂದಿನ ಅನೇಕ ಆಚಾರ್ಯರು, ಸಂತರು, ಸಾಧುಗಳು ಮತ್ತು ಸಜ್ಜನರೇ ಮೊದಲಾದ ಅನೇಕ ಧರ್ಮ ಪ್ರವರ್ತಕರು ಶ್ರಮವಹಿಸಿದವರಾಗಿದ್ದಾರೆ. ಈ ಪ್ರವರ್ತಕರು ತಮ್ಮ ತಪಸ್ಸಿನ ಮಹಿಮೆಯಿಂದ ದಿವ್ಯಜ್ಞಾನವನ್ನು ಪಡೆದು ತಮ್ಮ ದಿವ್ಯದರ್ಶನವನ್ನು ವಿವಿಧ ರೂಪಗಳ ಮೂಲಕ ಜನರಿಗೆ ಕೊಡುತ್ತಲೇ ಬಂದಿದ್ದಾರೆ. ಇವರುಗಳಿಂದ ಉಪದೇಶಿಸಲ್ಪಟ್ಟ ಜ್ಞಾನವನ್ನು ಅರಿತವರಾಗಿ ತನ್ಮೂಲಕ ತಮ್ಮ ಜೀವನದಿಂದ ಮುಕ್ತಿಯನ್ನು ಪಡೆದ ಮಹನೀಯರುಗಳು ಸರ್ವೇಸಾಮಾನ್ಯವಾಗಿದ್ದಾರೆ. ಹೀಗೆ ವಿವಿಧ ರೂಪಗಳಿಂದ ಉಪದೇಶಿಸಲ್ಪಟ್ಟ ತತ್ತ್ವಗಳಲ್ಲಿ ಅದ್ವೈತವು ಒಂದಾಗಿದ್ದರೆ ಅದರ ಪ್ರವರ್ತಕರಾಗಿ ಶ್ರೀ ಆದಿಶಂಕರಾಚಾರ್ಯರು ಕಂಡು ಬರುತ್ತಾರೆ. ಮುಂದೆ ಅವರ ತತ್ತ್ವೋಪದೇಶಗಳನ್ನು ಅರಿತು ಅನುಸರಿಸಿಕೊಂಡು ಹೋಗುತ್ತಿರುವ ಒಂದು ಪರಂಪರೆಯನ್ನು ನಾವು ಶಾಂಕರರು ಎಂದು ಗುರುತಿಸುತ್ತೇವೆ. ಮತ್ತು ಈ ಒಂದು ಅದ್ವೈತ ತತ್ತ್ವಜ್ಞಾನದ ಮೂಲಕ ಆತ್ಮಸಾಕ್ಷಾತ್ಕಾರ ಮಾಡಿಕೊಂಡು ಸಂಸಾರದಿಂದ ಬಿಡುಗಡೆಯನ್ನು ಪಡೆದು ಮೋಕ್ಷವನ್ನು ಹೊಂದುವುದಾಗಿದೆ.

ತತ್ತ್ವಗಳಾಗಲೀ ಅಥವಾ ತತ್ತ್ವಶಾಸ್ತ್ರಗಳಾಗಲೀ ಅವುಗಳ ಉದ್ದೇಶವೆಂದರೆ ನಮ್ಮ ಶರೀರದಲ್ಲಿರುವ ಜೀವನ ಸ್ವರೂಪ, ಜಗತ್ತಿನ ಸ್ವರೂಪ ಮತ್ತು ಪರಮಾತ್ಮನ ಸ್ವರೂಪಗಳನ್ನು ತಿಳಿಸುವುದು ಮಾತ್ರವಲ್ಲದೇ ಇವುಗಳ ನಡುವಿನ ಸಂಬಂಧವನ್ನೂ ಕೂಡ ಹೇಳಲು ಹೊರಟದ್ದಾಗಿದೆ. ಎಲ್ಲ ತತ್ತ್ವಗಳ ಉದ್ದೇಶವೂ ಇದೇ ಆಗಿದೆ. ಆದುದರಿಂದ ಅದ್ವೈತವೂ ಕೂಡ ತನ್ನದೇ ಆದ ರೀತಿಯಲ್ಲಿ ಈ ಮೇಲೆ ತಿಳಿಸಿದಂತೆ ಜೀವಾತ್ಮ, ಪರಮಾತ್ಮರ ವಿಚಾರವನ್ನು ತಿಳಿಸುವುದರ ಜೊತೆಗೆ ಜಗತ್ತಿನೊಂದಿಗೆ ಅವುಗಳ ಸಂಬಂಧವನ್ನೂ ತಿಳಿಸುತ್ತದೆ. ಅದ್ವೈತ ಎಂಬ ಹೆಸರೇ ಸೂಚಿಸುವಂತೆ 'ಎರಡಿಲ್ಲದ' ಎಂಬ ಪದದೊಂದಿಗೆ ಜಗತ್ತು, ಜೀವಾತ್ಮ ಮತ್ತು ಪರಮಾತ್ಮ ಎಂಬ ಈ ಮೂರೂ ಒಂದೇ ಆಗಿದೆ ಎಂದು ತಿಳಿಸುತ್ತಾ ಕಾರ್ಯ, ಕಾರಣ ಭಾವದಿಂದ ಅವುಗಳ ವ್ಯಕ್ತಾವ್ಯಕ್ತ ಸ್ಥಿತಿಯನ್ನು ಸೂಚಿಸುತ್ತಾ ಮಾಯಾಕಲ್ಪಿತವಾದ ಜೀವ, ಜಗತ್ತಿನ ಸ್ಥಿತಿಯನ್ನು ತಿಳಿಸಿ ಈ ಮಾಯೆಯೇ ಇವೆರಡೂ ಪರಮಾತ್ಮನಿಂದ ಭಿನ್ನವಾಗಿರಲು ಕಾರಣವೆಂದೂ ಹೇಳಲಾಗಿದೆ. ಅಂದರೆ ಯಾವ ರೀತಿಯಲ್ಲಿ ಒಂದು ಘಟ ಅಥವಾ ಮಡಿಕೆಗೆ ಮೃತ್ ಅಥವಾ ಮಣ್ಣು

Sri Vidyabharathi Book Centre, Sringeri

CC-O. In Public Domain. Digitized by eGangotri

ಎನ್ನುವುದು ಕಾರಣವಾಗಿರುತ್ತದೆಯೋ ಅದೇ ರೀತಿಯಲ್ಲಿ ಪರಮಾತ್ಮನೇ ಜೀವಾತ್ಮನಾಗಿ ಮತ್ತು ಜಗತ್ತಿನ ಸ್ವರೂಪದಲ್ಲಿ ಕಂಡು ಬರುತ್ತಿದ್ದಾರೆ ಎಂದು ಅದ್ವೈತ ತತ್ತ್ವವು ನಮಗೆ ತಿಳಿಸುತ್ತದೆ. ಅಂದರೆ ಜೀವ ಮತ್ತು ಜಗತ್ತಿನ ಸ್ವರೂಪದಲ್ಲಿ ಇರುವ ಇವೆರಡೂ ಪರಮಾತ್ಮನ ಕಾರ್ಯರೂಪವಾಗಿದೆ ಎಂದರ್ಥ. ಹೇಗೆ ಘಟವು ಒಡೆದ ಬಳಿಕ ತನ್ನ ರೂಪವನ್ನು ಕಳೆದುಕೊಂಡು ಮೃತ್ ರೂಪವನ್ನು ಹೊಂದುತ್ತದೆಯೋ ಅದೇ ರೀತಿಯಲ್ಲಿ ಯಾವುದೋ ಉಪಾಧಿಗೆ ಒಳಪಟ್ಟಿರುವ ಜೀವಾತ್ಮನು ಉಪಾಧಿಯ ತಿರೋಧಾನದ ಬಳಿಕ ಪರಮಾತ್ಮನೇ ಆಗುವುದು; ಹಾಗೆಯೇ ಕಾರ್ಯದಿಂದ ಉಂಟಾದ ಜಗತ್ತು ಹಾಗೆ ಕಾಣಿಸಿಕೊಂಡರೂ ಅದು ಮಾಯೆಯಿಂದ ಹಾಗೆ ಕಂಡು ಬರುವುದಾಗಿದ್ದು ಅದು ಕಂಡುಬರುವ ಸ್ಥಿತಿ ಪರಮಾತ್ಮನ ಲೀಲೆಯೇ ಆಗಿದೆ ಮತ್ತು ಅದು ಪರಮಾತ್ಮನ ಸ್ವರೂಪವೇ ಆಗಿದೆ ಎಂದು ಅದ್ವೈತಿಗಳ ಅಭಿಪ್ರಾಯ. ಶ್ರೀ ಆದಿಶಂಕರಾಚಾರ್ಯರು ಅದ್ವೈತಮತದ ಪ್ರವರ್ತಕರು. ಕ್ರಿ.ಶ. 700 ಅಥವಾ 800ರ ಸಮಯದಲ್ಲಿಯೇ ತಮ್ಮ ತತ್ತ್ವವನ್ನು ಭರತಖಂಡದ ಎಲ್ಲಾ ಜನತೆಗೆ ಉಪದೇಶಿಸಿ ಅದ್ವೈತಮತವನ್ನು ಪ್ರತಿಷ್ಠಾಪಿಸಿ ಭರತಖಂಡದ ನಾಲ್ಕೂ ದಿಕ್ಕುಗಳಲ್ಲಿ ಅದ್ವೈತ ಮತದ ಪ್ರಚಾರ ಕೇಂದ್ರಗಳಾಗಿ ಶ್ರೀಗುರು ಪೀಠಗಳನ್ನು ಸ್ಥಾಪಿಸಿ ತನ್ಮೂಲಕ ಜನತೆಗೆ ಮೋಕ್ಷಪ್ರಾಯರಾಗಿ ಕಂಡುಬರುತ್ತಾರೆ. ಇವರನ್ನೇ ನಾವು ಶ್ರೀಶಂಕರರು ಅಥವಾ ಆದಿಶಂಕರರು ಎಂದು ವ್ಯವಹರಿಸಿದರೆ ಇವರ ಶಿಷ್ಯರಾಗಿರುವವರು ಅಥವಾ ಆದಿಶಂಕರರಿಂದ ಪ್ರವರ್ತನಗೊಂಡ ಅದ್ವೈತಮತಾನುಯಾಯಿಗಳು ಶಾಂಕರರು ಎಂದು ಕರೆಯಲ್ಪಡುತ್ತಾರೆ. ಪ್ರತಿಯೊಬ್ಬ ವ್ಯಕ್ತಿಗೂ ಕೂಡ ತನ್ನ ಜೀವನದಲ್ಲಿ ತನ್ನದೇ ಆದ ಮತಧರ್ಮದ ಮೂಲಕ ಭಗವತ್‌ಪ್ರೀತನಾಗಿ ತನ್ಮೂಲಕ ಇಹ ಸಂಸಾರ ಬಂಧನದಿಂದ ವಿಮುಕ್ತನಾಗುವುದು ಇದ್ದೇ ಇದೆ. ಈ ದೃಷ್ಟಿಯಲ್ಲಿ ಶಾಂಕರರೂ ಕೂಡ ತಮ್ಮ ಮತಧರ್ಮದ ಮೂಲಕ ಆತ್ಮಜ್ಞಾನವನ್ನು ಹೊಂದಿದವರಾಗಿ ತನ್ಮೂಲಕ ಮೋಕ್ಷಸಾಧಕರಾಗಬೇಕು.

ಜ್ಞಾನದ ಮೂಲಕ ಅದ್ವೈತದಲ್ಲಿ ಮೋಕ್ಷವನ್ನು ಹೇಳಿರುವುದರಿಂದ ಅದ್ವೈತಿಗಳಿಗೆ ತನ್ಮೂಲಕ ಮೋಕ್ಷ ಸಾಧನೆಯಾಗಬೇಕೇ ವಿನಃ ಅನ್ಯಮಾರ್ಗದಿಂದಲ್ಲ. ಆದುದರಿಂದ ಶ್ರೀಶಂಕರರ ಮತಾನುಯಾಯಿಗಳು ಈ ಹಿಂದೆ ತಿಳಿಸಿದಂತೆ ಅದ್ವೈತ ತತ್ತ್ವದಲ್ಲಿ ನಿರೂಪಿಸಲ್ಪಟ್ಟಂತೆ ಪರಮಾತ್ಮನ ಸ್ವರೂಪವನ್ನು ಅರಿತವರಾಗಿ ತನ್ಮೂಲಕ ಮೋಕ್ಷಸಾಧಕರಾಗಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಶ್ನೋತ್ತರಗಳು

ಪ್ರಶ್ನೆ : ಭಗವತ್ಪಾಪ್ತಿಗೆ ಸುಲಭೋಪಾಯ ಯಾವುದು ?

ಹಂಸ : ಭಕ್ತಿ. ಪರಮಾತ್ಮನ ನಾಮಸ್ಮರಣೆ. ಇದು ಎಲ್ಲದಕ್ಕಿಂತಲೂ ಸುಲಭ.

ಪ್ರಶ್ನೆ : ಜಪ ಮಾಡಲಿಕ್ಕೆ ಕೂತರೆ ಮನಸ್ಸು ನಿಲ್ಲುವುದಿಲ್ಲಾ. ಅದಕ್ಕೇನು ಮಾಡಬೇಕು ?

ಹಂಸ : ಮನಸ್ಸು ಓಡಿಹೋದರೆ ಹೋಗಲಿ. ನೀನು ಜಪ ಮಾಡುತ್ತಾ ಇರು. ಮನಸ್ಸು ಓಡಿ ಹೋದಾಗ್ಯೂ ನೀನು ಮಾಡುತ್ತಿರುವುದರಿಂದ, ಮನಸ್ಸು ನೀನಲ್ಲ. ನಿನಗಿಂತ ಬೇರೆಯಾದದ್ದು. ಅದು ಹೋಗಲಿ. ನೀನು ಮಾತ್ರ ಜಪ ಬಿಡಬೇಡ.

ಪ್ರಶ್ನೆ : ಪುನರ್ಜನ್ಮ ಎಲ್ಲರಿಗೂ ಉಂಟೇ ?

ಹಂಸ : ಹೌದು. ಮೋಕ್ಷವಾಗುವವರೆಗೆ ಪ್ರತಿಯೊಬ್ಬನಿಗೂ ಪುನರ್ಜನ್ಮ ಇದ್ದೇ ಇದೆ.

ಪ್ರಶ್ನೆ : ಮೋಕ್ಷವಾದ ಮೇಲೆ ಎಲ್ಲಿ ಹೋಗುತ್ತಾನೆ ?

ಹಂಸ : ಮೋಕ್ಷವಾದಾಗ ಪರಬ್ರಹ್ಮನಲ್ಲಿ ಲೀನವಾಗುತ್ತಾನೆ. ಆಮೇಲೆ ಅವನಿಗೆ ಪುನರ್ಜನ್ಮ ಇಲ್ಲ.

ಪ್ರಶ್ನೆ : ಮೋಕ್ಷ ಹೇಗೆ ಸಿಗುತ್ತದೆ ?

ಹಂಸ : ಪರಮಾತ್ಮಜ್ಞಾನ ಉಂಟಾದಾಗ, ತಾನು ಪರಮಾತ್ಮನಿಗಿಂತ ಬೇರೆಯಲ್ಲ, "ನಾನು" ಎಂಬ ವ್ಯಕ್ತಿತ್ವವು ಇಲ್ಲವೇ ಇಲ್ಲ ಎಂಬ ಅರಿವು ಆದಾಗ ಮೋಕ್ಷವಾಗುತ್ತದೆ.

ಪ್ರಶ್ನೆ : ಕೆಲವರಿಗೆ ಏನೂ ಸಾಧನೆ ಮಾಡದೆ, ಇದ್ದಕ್ಕಿದ್ದಂತೆ ಜ್ಞಾನ ಉಂಟಾಗುತ್ತದೆಯಂತೆ. ತರಂಗ ಪತ್ರಿಕೆಯಲ್ಲಿ ಇಂತಹ ಒಬ್ಬ ವ್ಯಕ್ತಿಯ ಬಗ್ಗೆ ಲೇಖನ ಬಂದಿದೆ. ನೀವದನ್ನು ಓದಿದ್ದೀರಾ ?

ಹಂಸ : ಇಲ್ಲ ಓದಿಲ್ಲ. ಕೆಲವರಿಗೆ ಹಿಂದಿನ ಜನ್ಮದ ತಪಸ್ಸಿನ ಫಲವಾಗಿ ಈ ಜನ್ಮದಲ್ಲಿ ಸಾಧನೆ ಮಾಡದೆನೇ ಜ್ಞಾನ ಉತ್ಪತ್ತಿಯಾಗುತ್ತೆ.

* * *

Sri Vidyabharathi Book Centre, Sringeri

ಓಂಕಾರ

CC-O. In Public Domain. Digitized by eGangotri

ಪ್ರೊ. ನಾಗರಾಜ ಪದಕಿ

ಸಾವಿರಾರು ವರ್ಷಗಳಿಂದ, ವಿಶೇಷತೆಯಿಂದ ಬೆಳಗುತ್ತಿರುವ ಭಾರತದ ಹಿಂದೂಧರ್ಮದ ಆಡಿಗಲ್ಲುಗಳು, ವೇದಗಳು, (ಭಗವಂತನ ವಾಣಿ) ಉಪನಿಷತ್‌ಗಳು, ಸ್ಮೃತಿಗಳು, ಬ್ರಹ್ಮಸೂತ್ರಗಳು ಹಾಗೂ ಭಗವದ್ಗೀತೆ. ಯಾವ ಒಬ್ಬ ಮೂಲ ಮಾನವನಿಂದ ಬಂದಿದ್ದಲ್ಲ. ಎಲ್ಲ ಕಾಲಗಳ, ಎಲ್ಲ ದೇಶಗಳ ಮಹಾಮಹಿಮ ಸಂತರನ್ನು ಭಕ್ತಿಯಿಂದ ಗೌರವಿಸುವ ಪರಮತ ಸಹಿಷ್ಣುತೆ ಹಿಂದೂಧರ್ಮದಲ್ಲಿದೆ. ಪರಮಾತ್ಮನನ್ನು ನಿನ್ನ ನಂಬಿಕೆ, ಶ್ರದ್ಧೆಗಳಿಗನುಸಾರವಾಗಿ ಯಾವ ಸಾಕಾರ ರೂಪದಿಂದಾಗಲಿ, ನಿರಾಕಾರ ನಿರ್ಗುಣಾತ್ಮಕ ರೂಪದಿಂದಾಗಲಿ, ನಿನ್ನ ಇಚ್ಛೆಯಂತೆ ಆರಾಧಿಸು, ಧ್ಯಾನಿಸು ಎಂದು ಹೇಳುತ್ತದೆ ಹಿಂದೂಧರ್ಮ. (ವೇದಕಾಲದಿಂದಲೂ ಸಿಂಧೂ ನದಿಯ ಪೂರ್ವಕ್ಕೆ ಹರಡಿದ ಆರ್ಯಾವ್ರತದ ಉಚ್ಚತಮ ನಾಗರೀಕತೆಯಲ್ಲಿ ಆರಳಿದ ಮಾನವ ಸಮುದಾಯದ ಮೂಲಧರ್ಮ ಸನಾತನ ಧರ್ಮ. ಇತರರು ಅವರನ್ನು ಅಂದರೆ ಸಿಂಧೂ ತೀರದ ಜನರನ್ನು ಹಿಂದೂ ಎಂದು ಕರೆಯಲಾರಂಭಿಸಿದರು ಹಾಗು ಸನಾತನ ಧರ್ಮವು ಅಪಭ್ರಂಶವಾಗಿ ಹಿಂದೂಧರ್ಮ ಎನಿಸಿಕೊಂಡಿದೆ.)

ಧರ್ಮವೆಂಬುದರ ವ್ಯಾಖ್ಯಾನ ಸುಲಭವಲ್ಲ. ಅದು ಜಾತಿಯಲ್ಲ. ಶೀಲವಂತ, ನಿಯಮಬದ್ಧ, ಶಾಸ್ತ್ರಸಮ್ಮತ ಜೀವನದ ಚೌಕಟ್ಟು.

ಇಂದಿನ 20ನೇ ಶತಮಾನದ ಅಂಚಿನಲ್ಲಿರುವ ನಮ್ಮಂತಹ ಪ್ರಾಪಂಚಿಕ, ಲೌಕಿಕ ಜನಗಳ ಮುಖ್ಯ ಆಸೆ ಯಾವುದು ? ಸುಖ. ಯಾವತ್ತೂ, ಯಾವ ಕಾಲದಲ್ಲೂ ನಾವುಗಳು ಪರಮ ಸುಖಿಗಳಾಗಿರಬೇಕು, ಸಂತೋಷದಿಂದಿರಬೇಕು, ಸಕಲ ಭೋಗಭಾಗ್ಯಗಳು ನಮ್ಮದಾಗಿರಬೇಕು. ಎಲ್ಲಕ್ಕೂ ಮುಖ್ಯವಾಗಿ ಅಪರಿಮಿತ ಸಂಪತ್ತು ಬೇಕು. ಇವೆಲ್ಲ ನಮ್ಮ ಮನಸ್ಸಿನಾಳದಲ್ಲಿ ಸುಪ್ತ ಪ್ರಜ್ಞೆಯಲ್ಲಿ ಹುದುಗಿರುವ ಆಸೆಯ ಪ್ರತಿರೂಪಗಳು. ಹೌದು ತಾನೆ ? ಆದರೆ ಪರಮ ಶಾಂತಿಯ ಮೂಲಮಂತ್ರವಾದ ಧ್ಯಾನದ ಬಗ್ಗೆ ಯೋಚಿಸಲೂ ಸಹ ಪುರುಸೊತ್ತಿಲ್ಲ ನಮಗೆ. ಆದರಲ್ಲಿಯೂ ಮುಖ್ಯವಾಗಿ ಪ್ರಣವ ಸ್ವರೂಪಿ ಓಂಕಾರ ನಾದ ಬ್ರಹ್ಮದ ಬಗ್ಗೆ.

"ಓಂ" ಅಂದರೆ ಸರ್ವಾಂತರಯಾಮಿಯಾದ, ಆದಿ ಅಂತ್ಯಗಳಿಲ್ಲದ, ಅವಿನಾಶಿಯಾದ ಪ್ರಣವ. ಅಕ್ಷರ, ಪರಬ್ರಹ್ಮ. ಓಂಕಾರವಿಲ್ಲದ ಯಾವುದೇ ಧ್ಯಾನ, ಜಪ, ತಪಸ್ಸು, ಯಜ್ಞ, ಹೋಮಗಳು ನಿಷ್ಫಲ. ಈ ಭೌತಿಕ ಸಂಸಾರ ಸಾಗರವನ್ನು ದಾಟಿಸುವ ಶಕ್ತಿ ಓಂಕಾರಕ್ಕಿದೆ.

Sri Vidyabharathi Book Centre, Sringeri

ಆದ್ದರಿಂದಲೇ ಗಾಯತ್ರೀ ಮಂತ್ರದಲ್ಲಿ ಪ್ರಪ್ರಥಮ ಪ್ರಣವದ ಉಚ್ಚಾರ ಅತಿ ಅವಶ್ಯಕ.
CC-O. In Public Domain. Digitized by eGangotri

ಸರ್ವೇಷಾಮೇವ ಮಂತ್ರಾಣಾಂ ಕಾರಣಂ ಪ್ರಣವ ಸ್ಮೃತಃ
ತಸ್ಮಾತ್ ವ್ಯಾಹೃತಯೋ ಜಾತಾಸ್ತಾಭ್ಯೊ ವೇದತ್ರಯಂ ತಥಾ ॥
॥ ವೃದ್ಧಹಾರೀತ ಸ್ಮೃತಿ'' 6-88

ಓಂಕಾರವು ಸಮಸ್ತ ಮಂತ್ರಗಳಿಗೆ ಕಾರಣ. ಮೊದಲು ವ್ಯಾಹೃತಿಗಳಿಗೆ ಜನ್ಮ ನೀಡಿತು. ವ್ಯಾಹೃತಿಗಳಿಂದ ಮೂರು ವೇದಗಳು (ಋಕ್, ಯಜುರ್, ಸಾಮ) ಉತ್ಪತ್ತಿಯಾದವು.

ಓಂಕಾರವೇ 'ಉಮಾ' ಎಂಬುದನ್ನು ಕೇನೋಪನಿಷತ್‌ನ ಮೂರನೇ ಕಾಂಡದಲ್ಲಿ ಸುಂದರವಾಗಿ ಹೇಳಲ್ಪಟ್ಟಿದೆ. ದೇವತೆಗಳ ಗರ್ವಭಂಗಕ್ಕಾಗಿ ಬ್ರಹ್ಮವು (ಪರಮಾತ್ಮ) ಯಕ್ಷರೂಪದಿಂದ ಕಾಣಿಸಿಕೊಳ್ಳಲು ಅಗ್ನಿ, ವಾಯು ಮುಂತಾದ ದೇವತೆಗಳಿಗೆ ಅದೇನೆಂದು ತಿಳಿಯಲಾಗಲಿಲ್ಲ. ಇಂದ್ರನಿಗೂ ಸಹ ಮೊದಲು ತಿಳಿಯಲಾಗಲಿಲ್ಲ. ಆಗ ಗರ್ವಭಂಗದಿಂದ ತಬ್ಬಿಬ್ಬಾದ ಇಂದ್ರನೆದುರು ಸ್ತ್ರೀವೇಶದಲ್ಲಿ 'ಉಮಾರೂಪ' ಧಾರಿಣಿ ವಿದ್ಯಾದೇವಿ ಪ್ರತ್ಯಕ್ಷಳಾಗಿ – "ಆ ಯಕ್ಷ ಬೇರಾರೂ ಅಲ್ಲ, ಸಾಕ್ಷಾತ್ ಪರಮಾತ್ಮ. ಅತನ ಕೃಪೆಯಿಂದಲೇ ಇಡೀ ಬ್ರಹ್ಮಾಂಡ ನಡೆಯುವುದು. ನೀವುಗಳೂ ಸಹ" ಎಂದು ತಿಳಿಸಿದಳು. ಇದನ್ನು ಕೇಳಿದ ಇಂದ್ರನಲ್ಲಿ ಬೆಳಕು ಮೂಡಿತು !

ಈ 'ಉಮಾ' ಯಾರು ? ಬೇರಾರೂ ಅಲ್ಲ ಬ್ರಹ್ಮ ವಿದ್ಯೆ. ಅ, ಉ, ಮ ಈ ಮೂರು ಅಕ್ಷರಗಳಿಂದಲೇ 'ಓಂ' ಉದ್ಭವ. ಈ ಅಕ್ಷರಗಳನ್ನು ಬೇರೆ ಕ್ರಮದಿಂದ ಸಂಧಿ ಮಾಡಿದರೆ 'ಉಮಾ' ಆಗುತ್ತದೆ.

ಮಾಂಡೂಕ್ಯೋಪನಿಷತ್ತಿನಲ್ಲಿ ಪ್ರಣವದ ಬಗ್ಗೆ ಬಹು ಅರ್ಥಗರ್ಭಿತ ಶ್ಲೋಕಗಳಿವೆ. ಇದರ ಪ್ರಾರಂಭದಲ್ಲಿ,

ಓಮಿತ್ಯೇತದಕ್ಷರಮಿದಂ ಸರ್ವಂ, ತಸ್ಯೋಪವ್ಯಾಖ್ಯಾನಮ್
ಯಚ್ಚಾನ್ಯತ್ ತ್ರಿಕಾಲಾತೀತಂ ತದಪ್ಯೊಂಕಾರ ಏವ ॥ ೧ ॥

ಇದೆಲ್ಲವೂ ಓಂ ಎಂಬ ಈ ಅಕ್ಷರವು. ಅದರ ಅರ್ಥ ಹೀಗಿದೆ. ಹಿಂದೆ ಆಗಿ ಹೋಗಿದ್ದು, ಈಗ ಇರುವುದು, ಮುಂದಿನದೂ, ತ್ರಿಕಾಲಾತೀತವೂ, ಇನ್ನೂ ಯಾವುದಿದೆಯೋ ಅದೂ ಸಹ ಎಲ್ಲ ಈ ಓಂಕಾರವೇ.

ಓಂಕಾರವಾಗಿರುವ ಇದೆಲ್ಲವೂ ಬ್ರಹ್ಮವೇ. ಈ ಆತ್ಮನು ಬ್ರಹ್ಮ, ಓಂಕಾರದಿಂದ ಸೂಚಿಸಲ್ಪಡುವವನೂ, ಪರಬ್ರಹ್ಮ ಸ್ವರೂಪನೂ ಆದ ಈ ಆತ್ಮನಿಗೆ ವೈಶ್ವಾನರ, ತೈಜಸ, ಪ್ರಾಜ್ಞ ಹಾಗು ತುರೀಯ ಎಂಬ 4 ಪಾದಗಳು (ಮಾತ್ರೆಗಳು) ಇವೆ.

Sri Vidyabharathi Book Centre, Sringeri

ಜಾಗೃತಾವಸ್ಥೆಯಲ್ಲಿರುವ (ಎಚ್ಚರ ಸ್ಥಿತಿ) ವೈಶ್ವಾನರನು 'ಅಕಾರ'ವೆಂಬ ಮೊದಲನೇ ಮಾತ್ರೆ. ಸ್ವಪ್ನಾವಸ್ಥೆಯಲ್ಲಿರುವ ತೈಜಸನು 'ಉಕಾರ'ವೆಂಬ ಎರಡನೇ ಮಾತ್ರೆ. ಸುಷುಪ್ತಿ ಸ್ಥಾನದಲ್ಲಿರುವ (ಗಾಢನಿದ್ದೆ) ಪ್ರಾಜ್ಞನು 'ಮಕಾರ'ವೆಂಬ ಮೂರನೇ ಮಾತ್ರೆ. ಈ ಮೂರು ಮಾತ್ರೆಗಳ ಸಂಗಮವಾದ ಮಾತ್ರೆಯಲ್ಲದ 'ಓಂಕಾರವು' ವ್ಯವಹಾರಾತೀತವೂ ಅದ್ವೈತವೂ ಆದ ತುರೀಯ ಅವಸ್ಥೆ. ಅಂದರೆ ಪಾರಮಾರ್ಥಿಕವಾದ ಆತ್ಮಸ್ವರೂಪ.

CC-O. In Public Domain. Digitized by eGangotri

ಅ	+	ಉ	+	ಮ		ಓಂ
ವೈಶ್ವಾನರ		ತೈಜಸ		ಪ್ರಾಜ್ಞ		ಆತ್ಮಸ್ವರೂಪ
(ಜಾಗೃತಾವಸ್ಥೆ)		(ಸ್ವಪ್ನಾವಸ್ಥೆ)		(ಸುಷುಪ್ತಿ)		(ತುರೀಯ)

ಹೀಗ ಓಂಕಾರವೂ ಆತ್ಮನೇ. ಜಾಗೃತಾವಸ್ಥೆಯಲ್ಲಿ ದೇಹಧಾರೀ ಆತ್ಮನು ಬಾಹ್ಯ ಪ್ರಜ್ಞೆಯಿಂದ ಇಂದ್ರಿಯಗ್ರಾಹ್ಯ ಸ್ಥೂಲ ವಿಷಯಗಳನ್ನು, ಲೌಕಿಕ ಸಂಗತಿಗಳನ್ನು ಅನುಭವಿಸುತ್ತಾನೆ. ಸ್ವಪ್ನಾವಸ್ಥೆಯಲ್ಲಿ ಅಂತಃಪ್ರಜ್ಞನಾಗಿ ಸೂಕ್ಷ್ಮ ವಿಷಯಗಳನ್ನು ಅನುಭವಿಸುತ್ತಾನೆ. ಸುಷುಪ್ತಿಯಲ್ಲಿ ಅಂದರೆ ಗಾಢವಾದ ನಿದ್ದೆಯಲ್ಲಿ ಯಾವ ರೀತಿಯ ಕನಸು, ಬಯಕೆಗಳಿಲ್ಲದೆ ನಿಶ್ಚಲವಾಗಿ, ನಿಶ್ಚಿಂತೆಯಿಂದ ಇರುವ ಸ್ಥಿತಿ ಒದಗುತ್ತದೆ. ಇಲ್ಲಿ ಎಲ್ಲವೂ ಒಂದಾಗಿರುತ್ತದೆ. ಆತ್ಮನು ಇಲ್ಲಿ ಪ್ರಜ್ಞಾನಘನನೂ, ಆನಂದಮಯನೂ ಆಗಿರುತ್ತಾನೆ. ತುರೀಯಾವಸ್ಥೆಯಲ್ಲಿ ಆತ್ಮನು ಅದೃಶ್ಯನೂ, ಅವ್ಯವಹಾರ್ಯನೂ, ಅಗ್ರಾಹ್ಯನೂ, ಲಕ್ಷಣರಹಿತನೂ, ಕಾಲಾತೀತನೂ, ಅಚಿಂತ್ಯನೂ, ಏಕಾತ್ಮ ಪ್ರತ್ಯಯಸಾರನೂ, ಪರಮಾತ್ಮ ಸ್ವರೂಪಿಯೂ, ಪರಾತ್ಪರ ಪರಮೇಶ್ವರನೂ ಆಗುವನು. ಅದೇ ಆತ್ಮನ ಸ್ವಸ್ವರೂಪ ಎಂದು ತಿಳಿದುಕೊಳ್ಳಬೇಕು.

ಹೀಗೆ ಮಾಂಡೂಕ್ಯೋಪನಿಷತ್ತು ನಮಗೆ ಓಂಕಾರದ ವೈಶಾಲ್ಯತೆಯನ್ನು ಆತ್ಮದ ನಿಜಸ್ವರೂಪವನ್ನು ತಿಳಿಸುತ್ತದೆ.

ಶ್ರೀಮದ್ ಶಂಕರ ಭಗವತ್ಪಾದರ ಗುರುಗಳ ಗುರುವಾದ ಶ್ರೀ ಗೌಡಪಾದರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಈ ಉಪನಿಷತ್ತಿನ ತಾತ್ಪರ್ಯವನ್ನು (ಗೌಡಪಾದಕಾರಿಕಾ) ತಿಳಿಸಿದ್ದಾರೆ.

ಯುಂಜೀತ ಪ್ರಣವೇ ಚೇತಃ ಪ್ರಣವೋ ಬ್ರಹ್ಮನಿರ್ಭಯಮ್ ।
ಪ್ರಣವೇ ನಿತ್ಯಯುಕ್ತಸ್ಯ ನ ಭಯಂ ವಿದ್ಯತೇ ಕ್ವಚಿತ್ ॥ 25 ॥

ಓಂಕಾರದಲ್ಲಿ ಮನಸ್ಸನ್ನು ಸೇರಿಸಬೇಕು. ಓಂಕಾರವು ನಿರ್ಭಯವಾದ ಬ್ರಹ್ಮವು. ಓಂಕಾರದಲ್ಲಿ ಸದಾಯುಕ್ತನಾದವನಿಗೆ ಎಲ್ಲಿಯೂ ಭಯವಿಲ್ಲ.

Sri Vidyabharathi Book Centre, Sringeri

CC-0. In Public Domain. Digitized by eGangotri

ಸರ್ವಸ್ಯ ಪ್ರಣವೋ ಹ್ಯಾದಿರ್ಮಧ್ಯಮಂತಸ್ತಥೈವ ಚ ।
ಏವಂ ಹೀ ಪ್ರಣವಂ ಜ್ಞಾತ್ವಾ ವ್ಯಶ್ನುತೇ ತದನಂತರಮ್ ॥ 27 ॥

ಸರ್ವಕ್ಕೂ ಪ್ರಣವವೇ ಆದಿ, ಮಧ್ಯ ಹಾಗು ಅಂತ್ಯ. ಹೀಗೆಂದೇ ಓಂಕಾರವನ್ನು ಅರಿತುಕೊಂಡರೆ ತಕ್ಷಣವೇ (ಅದರ ಆತ್ಮಭಾವವನ್ನು) ಹೊಂದುತ್ತಾನೆ.

ಪ್ರಣವಂ ಹೀಶ್ವರಂ ವಿದ್ಯಾತ್ ಸರ್ವಸ್ಯ ಹೃದೀ ಸಂಸ್ಥಿತಮ್ ॥
ಸರ್ವವ್ಯಾಪಿನಮೋಂಕಾರ ಮತ್ವಾ ಧೀರೋನ ಶೋಚತಿ ॥ 28 ॥

ಓಂಕಾರವನ್ನು ಎಲ್ಲರ ಹೃದಯದಲ್ಲಿರುವ ಈಶ್ವರನೆಂದು ತಿಳಿಯಬೇಕು. ಸರ್ವವ್ಯಾಪಿಯಾದ ಓಂಕಾರವನ್ನು ಅರಿತುಕೊಂಡ ಧೀರನು ಶೋಕಿಸುವುದಿಲ್ಲ.

ಅಮಾತ್ರೋಽನಂತಮಾತ್ರಶ್ಚ ದ್ವೈತಸ್ಯೋ ಪಶಮಃ ಶಿವಃ ।
ಓಂಕಾರೋ ವಿದಿತೋ ಯೇ ನ ಸ ಮುನಿರ್ನೇತರೋ ಜನಃ ॥ 29 ॥

ಮಾತ್ರೆಗಳಿಲ್ಲದ್ದೂ, ಅನಂತಮಾತ್ರೆಗಳುಳ್ಳದ್ದೂ, ದ್ವೈತದ ಲಯವಾಗುವಂತಹದ್ದೂ, ಶಿವನೂ ಆದ ಓಂಕಾರವನ್ನು ಯಾವನು ಅರಿಯುತ್ತಾನೋ ಅವನೇ ನಿಜವಾದ ಯೋಗಿ (ಮುನಿ). ಇತರರು ಅಲ್ಲ.

ಯಜುರ್ವೇದ (ಅಧ್ಯಾಯ – 15) ಓಂ ಸ್ಮರ ಎನ್ನುತ್ತದೆ. ತಂತ್ರ ವಿದ್ಯೆಯ ಅತ್ಯುನ್ನತ ಸಾಧನೆಗಳಲ್ಲಿ ಒಂದಾದ ಶ್ರೀವಿದ್ಯೆಯ (ಶ್ರೀ ಚಕ್ರ) ಯಂತ್ರದಲ್ಲಿ ಬಿಂದುರೂಪಸ್ಥಿತಳಾದ ಪರಬ್ರಹ್ಮ ಸ್ವರೂಪಿಣಿಯಾದ ಆದಿಶಕ್ತಿ, ರಾಜ–ರಾಜೇಶ್ವರಿಯ ಸ್ತೋತ್ರದಲ್ಲಿ ಓಂಕಾರದ ಸ್ವರೂಪ ಹೀಗಿದೆ –

ಅಕಾರೇ ಬ್ರಹ್ಮರೂಪಿಣಿ, ಉಕಾರೇ ವಿಷ್ಣುರೂಪಿಣಿ ।
ಮಕಾರೇ ಶಿವರೂಪಿಣಿ ದೇವಿ ಪ್ರಾಣಮಯೀ ॥
ಸೂರ್ಯಕೋಟಿ ಪ್ರಕಾಶಿನೀ, ಚಂದ್ರಕೋಟಿ ಸಮಪ್ರಭ ।
ತನ್ಮಧ್ಯೆ ಸೂಕ್ಷ್ಮಂ ಬ್ರಹ್ಮರೂಪಂ ವ್ಯವಸ್ಥಿತಂ ।
ತಂ ನಮಾಮ್ಯಹಮ್ ॥

ಬ್ರಹ್ಮನು ಅಕಾರ, ಉಕಾರ, ಮಕಾರಗಳಿಂದ ಓಂಕಾರವನ್ನೂ ಭೂರ್ಭುವಃ ಸ್ವಃಗಳನ್ನು ಮೂರು ವೇದಗಳಿಂದಲೂ ತೆಗೆದನು ಎಂದು ಮನುಸ್ಮೃತಿ (2-76) ಹೇಳುತ್ತದೆ.

ಓಂಕಾರದ ಮಹತ್ತನ್ನು ವರ್ಣಿಸುವ ಸುಂದರ ಆಖ್ಯಾಯಿಕೆ ಛಾಂದೋಗ್ಯೋಪನಿಷತ್ತಿನಲ್ಲಿ ಬರುತ್ತದೆ. ಬೆನ್ನಟ್ಟಿದ್ದ ಮೃತ್ಯುವಿಗೆ ಹೆದರಿ ದೇವತೆಗಳು

CC-O. In Public Domain. Digitized by eGangotri
ಮೊದಲು ವೇದಗಳ ಮೊರೆ ಹೊಕ್ಕರು. ಆದರೆ ಮೃತ್ಯುವಿಲ್ಲದಂತೆ ಮಾಡಲಿಲ್ಲ ! ಆಗ ಹೆದರಿದ ದೇವತೆಗಳು ಕೊನೆಯಲ್ಲಿ 'ಓಂಕಾರದ' ಅಭೇದ್ಯ ದುರ್ಗದಲ್ಲಿ ಅಡಗಿದರು. ಮತ್ತು ಓಂಕಾರಕ್ಕೆ ಶರಣು ಬಂದೊಡನೆ ಮೃತ್ಯುಭಯದಿಂದ ಪಾರಾದರು. ತಾತ್ಪರ್ಯದಲ್ಲಿ ಹೇಳಬೇಕೆಂದರೆ, ನಿತ್ಯಜೀವನದಲ್ಲಿ ಧ್ಯಾನರೂಪದಲ್ಲಿ – ಗುರುಕೃಪೆಯಿಂದ ಓಂಕಾರೋಪಾಸನೆಯನ್ನು ನಾವು ಅನುಷ್ಠಾನಗೊಳಿಸಿದ್ದೇ ಆದರೆ, ಮೃತ್ಯುಭಯದಿಂದ ದೂರಾಗಿ ಅಮರತ್ವದೆಡೆಗೆ ಅಡಿಯಿಡುತ್ತೇವೆ. ದೈವಕೃಪೆಗೆ ಪಾತ್ರರಾಗಿ ಆನಂದಮಯರಾಗುತ್ತೇವೆ.

ಭಗವದ್ಗೀತೆಯ – "ಓಂ ಮಿತ್ಯೇಕಾಕ್ಷರಂ ಬ್ರಹ್ಮ" ಹಾಗು "ಪ್ರಣವಃ ಸರ್ವವೇದೇಷು" ಎಂಬ ಶ್ಲೋಕಗಳ (ಉಪದೇಶಗಳ) ಅರ್ಥವೂ ಇದೇ ಆಗಿದೆ.

ಆತ್ಮಸಾಕ್ಷಾತ್ಕಾರವಾದ ಯೋಗಿವರ್ಯರಿಗೆ, ಸಿದ್ಧಿಪುರುಷರಿಗೆ, ಅವಧೂತರಿಗೆ, ಸಂತ ಶಿರೋಮಣಿಗಳಿಗೆ, ಆಚಾರ್ಯರಿಗೆ, ಯತಿಗಳಿಗೆ, ದೃಷ್ಟಾರರಿಗೆ, ಪ್ರಕೃತಿಯ ಅಂತರಾಳದಲ್ಲಿ ಸರ್ವವೂ ಬ್ರಹ್ಮಮಯವಾಗಿ ಓಂಕಾರದ ಮಂಜುಳನಾದ ನಿರಂತರವಾಗಿ ಕೇಳಿಸುತ್ತಿರುತ್ತದೆ. ಅ, ಉ ಹಾಗೂ ಮ ಮೂಲತಃ ಬ್ರಹ್ಮ, ವಿಷ್ಣು, ಶಿವ (ಸೃಷ್ಟಿ, ಸ್ಥಿತಿ, ಲಯ) ಶಕ್ತಿಯ ಸಂಕೇತ. ಕ್ರಿಶ್ಚಿಯನ್ ಧರ್ಮದಲ್ಲಿ ಗೌರವ ಪೂರ್ವಕವಾಗಿ 'ಆಮೇನ್' ಎಂದೂ ಇಸ್ಲಾಮ್ ಧರ್ಮದಲ್ಲಿ 'ಆಮೀನ್' ಎಂದು ಉಚ್ಚರಿಸುತ್ತಾರೆ. ಇವೆರಡೂ ವಾಸ್ತವವಾಗಿ ಓಂ ಶಬ್ದದ ಪರಿವರ್ತನಾರೂಪವೆಂದು ಅನಿಸುವುದಿಲ್ಲವೇ ?

ಓಂ ಶಬ್ದಕ್ಕೆ 19 ವಿಶೇಷ ರೀತಿಯ ಅರ್ಥಗಳಿವೆ. ಯಾವುದೆಂದರೆ ರಕ್ಷಣೆ, ಗತಿ, ಕಾಂತಿ, ಪ್ರೀತಿ, ತೃಪ್ತಿ, ಅವಗಮ, ಪ್ರವೇಶ, ಶ್ರವಣ, ಸ್ವಾಮಿತ್ವ, ಯೋಚನಾ, ಕ್ರಿಯಾ, ಇಚ್ಛಾ, ದೀಪ್ತಿ, ವ್ಯಾಪ್ತಿ, ಆಲಿಂಗನ, ಹಿಂಸಾ, ದಾನ, ಭೋಗ, ಮತ್ತು ವೃದ್ಧಿ.

ಓಂ ಅವ್ಯಯವಾಚಕ. ಇದರ ಎದಿರು ಯಾವ ವಿಭಕ್ತಿ ಪ್ರತ್ಯಯವೂ ಬರುವಂತಿಲ್ಲ. ಏಕೆಂದರೆ ಓಂ ಅವಿನಾಶಿ, ಅನಾದಿ, ಅನಂತ.

* * *

CC-0. In Public Domain. Digitized by eGangotri

ಪುನರ್ಜನ್ಮ ಮತ್ತು ಪುನರುತ್ಥಾನ

– ಸ್ವಾಮಿ ವಿರಾಜೇಶ್ವರ

ಭಾರತೀಯ ಆರ್ಷೇಯ ಸನಾತನ ಧರ್ಮ ಹಾಗು ಶಾಸ್ತ್ರಗಳ ಮೂಲಭೂತ ಸಿದ್ಧಾಂತ (ತತ್ವ)ಗಳಲ್ಲಿ ಪುನರ್ಜನ್ಮವೂ ಒಂದು. ನಮ್ಮ ಜನ್ಮಗಳಿಗೆ ನಮ್ಮ ಕರ್ಮಗಳೇ ಮೂಲ ಕಾರಣ ಹೊರತು ಬೇರಾವ ಅತಿಮಾನುಷ ಶಕ್ತಿ ಅಲ್ಲ. ನಮ್ಮ ವರ್ತಮಾನ ಜೀವನದ ನೋವು–ಸಂಕಟಗಳಿಗೆ, ಸುಖ ಸಂತೋಷಗಳಿಗೆ ನಮ್ಮ ಪೂರ್ವಜನ್ಮದ ಕರ್ಮಗಳು, ನಡವಳಿಕೆಗಳೇ ಕಾರಣ. ಭಗವಾನ್ ಶ್ರೀಕೃಷ್ಣ ಅರ್ಜುನನಿಗೆ ಈ ರೀತಿ ಉಪದೇಶಿಸಿದ್ದಾನೆ. "ಹೇ ಅರ್ಜುನ ನನಗೂ ನಿನಗೂ ಅನೇಕ ಜನ್ಮಗಳು ಕಳೆದು ಹೋಗಿವೆ. ಅವುಗಳೆಲ್ಲವನ್ನು ನಾನು ಬಲ್ಲೆನು. ಆದರೆ ನೀನು ಅದನ್ನು ಅರಿಯೆ" (ಭಗವದ್‌ಗೀತಾ 4ನೇ ಅಧ್ಯಾಯ – 5ನೇ ಶ್ಲೋಕ) ಹಿಂದೆ ನನಗೆ ಜನ್ಮ ಇತ್ತು ಮತ್ತು ಆ ಜನ್ಮದ ಕರ್ಮಗಳ ಕಾರಣದಿಂದ ಈ ಜನ್ಮದಲ್ಲಿ ಜನಿಸಿದ್ದೇನೆ ಮತ್ತು ಮುಂದೆಯೂ ಜನಿಸಲಿರುವೆ ಎನ್ನುವ ಪರಿಕಲ್ಪನೆ, ಮಾನವನು ಸಾತ್ವಿಕನಾಗಿ, ಧರ್ಮಭೀರುವಾಗಿ ಪಾಪಾಚರಣೆಗಳನ್ನು ಮಾಡದೆ ಜೀವಿಸಲು ಪ್ರೇರೇಪಿಸುತ್ತದೆ.

ಈ ಜನ್ಮದಲ್ಲಿ ನೀವು ಸಂತೋಷಮಯ ಜೀವನ ನಡೆಸುತ್ತಿರುವ ಕಾರಣ ನಿಮ್ಮ ಪೂರ್ವ ಜನ್ಮದಲ್ಲಿ ಮಾಡಿದ ಸತ್ಕರ್ಮಗಳು. ದುಷ್ಕರ್ಮಗಳನ್ನು ಮಾಡುತ್ತ ದುರಾಚಾರಿಯಾಗಿ ಜೀವಿಸಿದ್ದರೆ, ಅವುಗಳ ಪ್ರತ್ಯಕ್ಷ ಪ್ರತಿಫಲವೇ ಈ ಜನ್ಮದ ದುಃಖಿಮಯ, ಸಂಕಟಮಯ ಜೀವನ. ಕರ್ಮ ಬಂಧನದ ಕೊಂಡಿಗಳು ಜನ್ಮ ಜನ್ಮಾಂತರಗಳಲ್ಲಿ (ಜನ್ಮದಿಂದ ಜನ್ಮಕ್ಕೆ) ಚಾಚಿಕೊಂಡಿವೆ. ಈ ಜನ್ಮದಲ್ಲಿ ಸತ್ಕರ್ಮಗಳನ್ನು ಮಾಡುತ್ತ ನೈತಿಕ ನೆಲೆಗಟ್ಟಿನಲ್ಲಿ, ಧರ್ಮಾಧರ್ಮಗಳ ವಿವೇಚನೆಯಿಂದ ನೀತಿವಂತನಾಗಿ ಜೀವಿಸಿದರೆ, ಮುಂಬರುವ ಜನ್ಮದಲ್ಲಿ ಕುಲೀನ, ಶ್ರೀಮಂತ ಶ್ರೇಷ್ಠ ಕುಟುಂಬದಲ್ಲಿ ಜನಿಸಬಹುದು. ಆದರೆ ಅನೈತಿಕ, ಭ್ರಷ್ಟ, ದುಷ್ಕರ್ಮಯುಕ್ತ ಜೀವನ ನಡೆಸಿದರೆ, ಆಚಾರಹೀನ, ಪಾಪಿಷ್ಠ ಕುಟುಂಬದಲ್ಲಿ ಜನಿಸಬೇಕಾಗಬಹುದು. ಇವೆಲ್ಲವೂ ಕಾರ್ಯ–ಕಾರಣ ಫಲ ಸ್ವರೂಪಿ ಕರ್ಮ ನಿಯಮಗಳನುಸಾರವಾಗಿ ನಿರ್ಧರಿಸಲ್ಪಡುತ್ತವೆ.

ನಮ್ಮ ದೈನಂದಿನ ಜೀವನದಲ್ಲಿಯೂ ಸಹ ಈ ಕರ್ಮ ಸಿದ್ಧಾಂತದ ಪ್ರಭಾವಕ್ಕೆ ಅನೇಕ ಉದಾಹರಣೆಗಳನ್ನು ನೋಡಬಹುದು. ಒಬ್ಬ ರೈತ ಪರಿಶ್ರಮದಿಂದ ವ್ಯವಸಾಯಕ್ಕೆ ಭೂಮಿಯನ್ನು ಉತ್ತು, ಬೀಜಗಳನ್ನು ಬಿತ್ತಿ, ಕಾಲಕಾಲಕ್ಕೆ ನೀರು ಗೊಬ್ಬರಗಳನ್ನುಣಿಸಿ, ಕಳೆಕಿತ್ತು, ಸಸಿಗಳನ್ನು ಕ್ರಿಮಿ, ಕೀಟ, ಪಶುಪಕ್ಷಿಗಳಿಂದ ಸಂರಕ್ಷಿಸುತ್ತಿದ್ದರೆ, ಆತನಿಗೆ ಉತ್ತಮ ಫಸಲು ದಕ್ಕುತ್ತದೆ. ಆದರೆ ಅಪ್ಪಟ ಸೋಮಾರಿಯಾದ ವ್ಯರ್ಥ ಕಾಲಹರಣ ಮಾಡುವ ರೈತನಿಗೆ ಒಳ್ಳೆಯ ಫಸಲು ದಕ್ಕುವುದಿಲ್ಲ. ಇದು ಅಲ್ಪಕಾಲದಲ್ಲಿ ತಕ್ಕ ಪ್ರತಿಫಲ

Sri Vidyabharathi Book Centre, Sringeri

CC-0. In Public Domain. Digitized by eGangotri
ಕೊಡುವಂತಹ ಕರ್ಮದ ಉದಾಹರಣೆ. ಇಂದು ಒಬ್ಬ ವ್ಯಕ್ತಿ ಅತ್ಯಂತ ಬುದ್ಧಿಶಾಲಿಯು, ಬುದ್ಧಿವಂತ, ಹೆಸರಾಂತ ಡಾಕ್ಟರ್ ಆಗಿರುವುದರ ಹಿನ್ನೆಲೆ, ಆತನ ಹಿಂದಿನ ಅನೇಕ ವರ್ಷಗಳ ಸತತ ಪರಿಶ್ರಮ, ಬುದ್ಧಿವಂತಿಕೆ, ಏಕಾಗ್ರತೆ ಮತ್ತು ಉನ್ನತ ವೈದ್ಯಕೀಯ ಪದವಿಯ ಫಲ. ಅದೇ ರೀತಿ ಹಿಂದೆಂದೋ ಮಾಡಿದ ಕಾನೂನುಬಾಹಿರ ಅಕ್ಷಮ್ಯ ಅಪರಾಧಗಳಿಗೆ, ಇಂದು ಒಬ್ಬ ವ್ಯಕ್ತಿ ಶಿಕ್ಷಿತನಾಗಿ ಸೆರೆಮನೆಯವಾಸ ಅನುಭವಿಸುತ್ತಿರುತ್ತಾನೆ. ಈ ರೀತಿ ಅನೇಕ ಉದಾಹರಣೆಗಳನ್ನು ನೋಡಬಹುದಾದರೂ, ಕೆಲವು ಅತ್ಯಂತ ಘೋರ ಘಾತಕ ಕರ್ಮಗಳು ತಮ್ಮ ಫಲ ನೀಡಲು ಈ ಒಂದು ಜನ್ಮ ಸಾಲದೆ ಅನೇಕ ಜನ್ಮಗಳು ಬೇಕಾಗಬಹುದು. ಮುಂದಿನ ಜನ್ಮಗಳಲ್ಲಿ ಅಂತಹ ಭೀಭತ್ಸ, ನರಳಾಟದ ಜೀವನ ನಡೆಸುವ ಕಲ್ಪನೆಯೇ, ಮಾನವ ಸ್ವಇಚ್ಛೆಯಿಂದ ಪಾಪಕರ್ಮಗಳನ್ನು ಮಾಡದೆ ಧರ್ಮಾಚರಣೆಯಿಂದ ಜೀವಿಸಲು ಪ್ರೇರಣೆ ನೀಡುತ್ತದೆ. ಕರ್ಮ ಧರ್ಮ ಹಾಗೂ ಜನ್ಮ (ಪುನರ್ಜನ್ಮ)ಗಳ ನಿಯಮಗಳೇ ನಮ್ಮ ಸನಾತನ ಧರ್ಮದ ಉಪದೇಶದ ಸಾರ ಸರ್ವಸ್ವ (ತಿರುಳು). ಧರ್ಮ, ಕರ್ಮ ಮತ್ತು ಜನ್ಮಗಳು ಅತ್ಯಂತ ಮಾರ್ಮಿಕವಾಗಿ ಪರಸ್ಪರ ಪೂರಕವಾಗಿವೆ ಹಾಗು ಸಮಾಜದ ಶಿಸ್ತು, ನಿಯಮ ಹಾಗು ಸಾಮರಸ್ಯಗಳನ್ನು ನಿಯಂತ್ರಿಸುತ್ತವೆ. ಉಪನಿಷತ್‌ಗಳು, ಭಗವದ್‌ಗೀತೆ ಹಾಗು ಬ್ರಹ್ಮಸೂತ್ರಗಳೂ ಸಹ (ಪ್ರಸ್ಥಾನತ್ರಯವು) ಮುಕ್ತಿಯ (ಜನನ-ಮರಣ ಚಕ್ರದಿಂದ ಬಿಡುಗಡೆ) ಬಗ್ಗೆ ವಿಶದವಾಗಿ, ಅರ್ಥಪೂರ್ಣವಾಗಿ ಸೂಚಿಸಿವೆ. **ಯಾಕೆಂದರೆ ಮುಕ್ತಿಯೇ ಜೀವಿಯ ಅಂತಿಮ ಲಕ್ಷ್ಯವೆಂಬುದು ಎಲ್ಲ ಶ್ರುತಿಗಳ, ಸ್ಮೃತಿ, ಶಾಸ್ತ್ರ, ದರ್ಶನಗಳ, ವೇದಾಂತದ ಸಾರ ಸರ್ವಸ್ವ.**

ಹೀಗಿರುವಾಗ ಪುನರ್ಜನ್ಮದಲ್ಲಿ ವಿಶ್ವಾಸವಿಲ್ಲದ ಅನ್ಯಮತಗಳು ಏನನ್ನುತ್ತಿವೆ ಅನ್ನುವ ಪ್ರಶ್ನೆ ಅನೇಕ ಸಲ ಬಂದಿದೆ. ಆ ಮತಗಳ ಸಿದ್ಧಾಂತಗಳಂತೆ ಸಾವಿನ ನಂತರ ಮರುಹುಟ್ಟು ಇದೆಯೇ ಅಥವಾ ಇಲ್ಲವೇ ? ಇಲ್ಲದಿದ್ದ ಪಕ್ಷದಲ್ಲಿ ಹಿಂದೂಧರ್ಮೀಯರಾದ ನಾವು ಮಾತ್ರ ಯಾಕೆ ಒಪ್ಪಬೇಕು ?

ಆಧುನಿಕ ವಿಜ್ಞಾನ ಮತ್ತು ಇತರ ಮತಗಳ ಸಿದ್ಧಾಂತಗಳಂತೆ ಪುನರ್ಜನ್ಮದಲ್ಲಿ ವಿಶ್ವಾಸವಿಲ್ಲವೆನ್ನುವುದು ಸತ್ಯ. ಈ ವರ್ತಮಾನದಲ್ಲಿ ಜನಿಸಿರುವುದೇ ಸತ್ಯ. ಇದೇ ಮೊದಲು ಹಾಗೂ ಕೊನೆ. ಇದರ ಹಿಂದೆ ಜನ್ಮವಿರಲಿಲ್ಲ ಮತ್ತು ಮುಂದೆ ಹುಟ್ಟುವುದಿಲ್ಲ ಎನ್ನುವುದು ಆ ಮತಗಳ ವಾದಸರಣಿ.

ಇಂದಿನ ಆಧ್ಯಾತ್ಮಿಕತೆಯ ಅಭಾವಯುಕ್ತ, ಘೋರ ತಮೋಮಯ ಕಲಿಯುಗದಲ್ಲಿ ಈ ಮತಗಳು ಪ್ರಾವಿರ್ಭವಿಸಿರುವುದರಿಂದ, ನಮ್ಮ ಪ್ರಾಚೀನ ಮಹರ್ಷಿಗಳು, ಪರಮಯೋಗಿಗಳು ತಮ್ಮ ದಿವ್ಯಜ್ಞಾನದಿಂದ ಕಂಡುಕೊಂಡ, ಪ್ರಖರ, ಆಳ ಆಧ್ಯಾತ್ಮಿಕ

CC-0. In Public Domain. Digitized by eGangotri

ಚಿಂತನೆಯ ಅನುಭವಗಳನ್ನು ಆತ್ಮಜನ ಮತ ಪ್ರವರ್ತಕರು (ಪ್ರವಾದಿಗಳು) ಪಡೆಯಲಿಲ್ಲವೆಂದು ಹೇಳಬೇಕಾಗುತ್ತದೆ. ಭೌತಿಕ ವಾದಿಗಳಾದ್ದರಿಂದ ಅವರಿಗೆ ಮುಕ್ತಿಯಲ್ಲಾಗಲಿ, ಕರ್ಮಸಿದ್ಧಾಂತದಲ್ಲಾಗಲಿ, ಪುನರ್ಜನ್ಮದಲ್ಲಾಗಲಿ ವಿಶ್ವಾಸವಿಲ್ಲ. ಅವರ ಗ್ರಂಥಗಳು, ಅನುಶಾಸನಗಳ ಪ್ರಕಾರ ಮುಕ್ತಿಯೆನ್ನುವುದು ದೇವರ ಕಟ್ಟಕಡೆಯ 'ನ್ಯಾಯದಿನದಂದು' (day of Judgement) ಮೃತ ಶರೀರದ ಪುನರುತ್ಥಾನ ಹಾಗು ದೇಹದ ಜೊತೆ ಆತ್ಮದ ಪುನರ್ಮಿಲನ. ಆ 'ನ್ಯಾಯದಿನ' ಬರುವವರೆಗೂ ಮೃತದೇಹ ಹಾಗೂ ಆತ್ಮ ಸಾವಿರಾರು ವರ್ಷಗಳವರೆಗೆ ದೂರವಾಗಿರುತ್ತವೆ. ಆ "ನ್ಯಾಯದಿನ" ಎಂದು ಬರುವುದು ? ಹೇಳಲಸಾಧ್ಯ. ಆದರೆ ಮಣ್ಣಲ್ಲಿ ಸೇರಿದ ಮೃತದೇಹ ಯಥಾಸ್ಥಿತಿಯಲ್ಲಿರದೆ ಕಾಲಕ್ರಮೇಣ ಕೊಳೆತು ಮಣ್ಣಾಗಿ ಹೋಗುವುದು ಎಲ್ಲರಿಗೂ ಗೊತ್ತು. ಇದಕ್ಕಿನ್ನಾವ ವೈಜ್ಞಾನಿಕ, ಸೈದ್ಧಾಂತಿಕ ಪುರಾವೆ ಅನವಶ್ಯಕ. ಆದ್ದರಿಂದ ಮೃತಜೀವಿ 'ಪುನಶ್ಚೇತನ' (Resurrection)ಗೊಳ್ಳುವುದು ಅಸಾಧ್ಯ ಮತ್ತು ಆತ್ಮದ ಪುನರ್ಮಿಲನ ಕೂಡ ಅಸಂಭವ.

ಸಾಮಾನ್ಯವಾಗಿ ಸಾವಿನ ಸಮಯದಲ್ಲಿ ದೇಹ ವೃದ್ಧಾಪ್ಯದ ದೆಸೆಯಿಂದ ಹಣ್ಣಾಗಿ, ಸುಕ್ಕಾಗಿ, ಸೊರಗಿ, ಕೃಷವಾಗಿ, ರೋಗರುಜಿನುಗಳ ಗೂಡಾಗಿರುವುದು. ಅಂತಹ ಉಪಯೋಗರಹಿತ ಜೀರ್ಣಾವಸ್ಥೆಯ ಶರೀರವನ್ನು ಆತ್ಮವು ತ್ಯಜಿಸುತ್ತದೆ, ಆಯುಷ್ಯ ತೀರಿದ ಬಳಿಕ ಅದೇ ಶರೀರವನ್ನು ಪುನಃ ಪ್ರವೇಶಿಸಿ ನರಕಯಾತನೆ ಅನುಭವಿಸುವುದು ಅರ್ಥಹೀನ, ಮತ್ತು ಅದು 'ಬಿಡುಗಡೆ' (ಮುಕ್ತಿ)ಯೂ ಅಲ್ಲ 'ಸ್ವರ್ಗವೂ' ಅಲ್ಲ. ಆದ್ದರಿಂದ ಆತ್ಮದ ಪುನರ್ಮಿಲನದಿಂದ ಮೃತದೇಹ ಪುನಃಚೇತನಗೊಳ್ಳುತ್ತದೆ ಎಂಬ ನಂಬಿಕೆ ಯತಾರ್ಥವಾಗಿಯೂ, ಪಾರಮಾರ್ಥಿಕವಾಗಿಯೂ ಅಸಾಧ್ಯ.

ಹಾಗಾದರೆ, 'ಪುನರ್ಮಿಲನ'ವೆಂದರೇನು ? ರೋಗಿಷ್ಠ, ವಯೋವೃದ್ಧ, ಅಸಹಾಯಕ ಶರೀರವನ್ನು ತ್ಯಜಿಸಿದ ಜೀವಾತ್ಮ ಅವ್ಯಕ್ತ, ಸೂಕ್ಷ್ಮ ಶರೀರದಲ್ಲಿದ್ದು ಅಗೋಚರವಾಗಿ, ಹೊಚ್ಚ ಹೊಸ, ಆರೋಗ್ಯವಂತ ನವ್ಯ ಶರೀರವನ್ನು ಭ್ರೂಣಾವಸ್ಥೆಯಲ್ಲಿ ಪ್ರವೇಶಿಸುವುದು. ಇದು ತಾಯಿಯ ಗರ್ಭದಲ್ಲಿ ಸಾಧ್ಯ. ಈ ರಿತಿ ನವ ಶರೀರಧಾರಣೆ ಮಾಡಿದ ಆತ್ಮ ಮರುಹುಟ್ಟು ಪಡೆದು ಹಂತಹಂತವಾಗಿ ಬೆಳೆಯುತ್ತ ಶಿಶುವಾಗಿ ಜನ್ಮ ತಳೆಯುತ್ತದೆ. ಅಂದರೆ ಆತ್ಮದ 'ಪುನರ್ಮಿಲನ'ವೆಂದರೆ ಪುನರ್ಜನ್ಮವೇ. ನಂತರ ದೇಹದ ಬೆಳವಣಿಗೆ ವೃದ್ಧಿಯಾದಂತೆ ಆಯುಷ್ಯದ ಕೊನೆಯವರೆಗೆ ಮತ್ತೆ ಐಹಿಕ ಜೀವನ ಮುಂದುವರೆಯುವುದು. (ಅಂದರೆ ಜೀವಾತ್ಮನ ಹೊಸ ಪಯಣದ ಪುನರಾರಂಭ).

ಆದ್ದರಿಂದ ಪ್ರವಾದಿಜನ್ಯ ಮತಗಳ 'ಸ್ವರ್ಗ' ಹಾಗು 'ಮುಕ್ತಿ'ಯ ವಿಚಾರಧಾರೆಗಳು ನಮ್ಮ ಸನಾತನ ಧರ್ಮದ ಪುನರ್ಜನ್ಮ ಸಿದ್ಧಾಂತವನ್ನೇ

CC-0. In Public Domain. Digitized by eGangotri

ಅರ್ಥೈಸುತ್ತವೆಯೇ ಹೊರತು ಮೃತದೇಹದಲ್ಲಿರುವ ಆತ್ಮ ಪುನರ್ಜನ್ಮವನ್ನು ಅಥವಾ ಮೃತ ಶರೀರದ ಪುನಃಶ್ಚೇತನವನ್ನು ಅಲ್ಲ. ನಾವು ಯಾವುದನ್ನು 'ಪುನರ್ಜನ್ಮ'ವೆನ್ನುತ್ತೇವೆಯೋ, ಅದನ್ನು ಆಯಾ ಮತಗಳು ಪುನಃಶ್ಚೇತನ ಎಂದು ಹೇಳುತ್ತೇವೆ. ಆದ್ದರಿಂದ 'ಪುನರ್ಜನ್ಮ ಸಿದ್ಧಾಂತ'ವು ದೈವಿಕ ನಿಯಮ ಹಾಗು ಕಾಲ, ದೇಶ ಅವಸ್ಥೆಗಳನ್ನು ಮೀರಿದ, ವಿಶ್ವದ ಎಲ್ಲ ಮತಗಳ, ವರ್ಣಗಳ, ಜನಾಂಗಗಳಿಗೆ ಸಂಬಂಧಿಸಿದ ಸರ್ವಕಾಲಿಕ, ಸಾರ್ವತ್ರಿಕ ಸತ್ಯ. ಗೊತ್ತಿರಲಿ ಅಥವಾ ಗೊತ್ತಿಲ್ಲದಿದ್ದರೂ ಯಾರೂ ಇದರಿಂದ ಹೊರತಲ್ಲ.

ಇತರ ಮತಗಳ ಉಪದೇಶಗಳಲ್ಲಿ, ಉಕ್ತಿಗಳಲ್ಲಿ ನಿರಂತರ ಜನನ–ಮರಣ ಚಕ್ರದಿಂದ ಬಿಡುಗಡೆ ಹೊಂದಿ ಮುಕ್ತಿ ಪಥದಲ್ಲಿ ನಡೆಯುವ ಗುರಿ, ವಿಧಾನಗಳ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲದಿರುವುದು ವಿಷಾದದ ಸಂಗತಿ. ನಮ್ಮ 'ಸ್ವರ್ಗ', 'ನರಕ'ಗಳ ಪರಿಕಲ್ಪನೆಯಂತೆ ಆ ಮತಗಳೂ ಸಹ ವರ್ಣಿಸುತ್ತವೆ. ಮುಕ್ತಿ ಎಂದರೆ 'ಸ್ವರ್ಗ' ಸೇರುವುದು ಎಂಬುದು ಆಯಾ ಮತಗಳ ಅಭಿಪ್ರಾಯ. ಆದರೆ 'ಸ್ವರ್ಗವಾಸ'ವೆನ್ನುವುದು ನಿರಂತರ ಕಾಲಾತೀತವಾದ ಸತ್ಯವಲ್ಲ. ಅದು ಕ್ಷಣ ಭಂಗುರ. ಅರ್ಜಿತ ಪುಣ್ಯಫಲದ ಅವಧಿಯನಂತರ ಸ್ವರ್ಗಸ್ಥನಾದ ಜೀವಾತ್ಮ ಮತ್ತೆ ಕರ್ಮಾನುಸಾರ ಭೂಮಿಗೆ ಮರಳಬೇಕಾಗುತ್ತದೆ, ಹೊಸ ಗರ್ಭದಲ್ಲಿ ಪುನರ್ಜನ್ಮ ಪಡೆಯಲು.

(ಮುಂದುವರೆಯುವುದು)

* * *

ಹಂಸಾಶ್ರಮ ಅಣುಸೋಣೆಯಲ್ಲಿ ಕಾರ್ಯಕ್ರಮಗಳು :

1. ಗುರು ಪೂರ್ಣಮ - ಬುಧವಾರ (28-7-99)
2. ಗೀತಾ ಜಯಂತಿ - ಭಾನುವಾರ (19-12-99).
3. ಒಂದು ದಿನದ ಯೋಗ ಶಿಬಿರ :
   ಬೆಳಗ್ಗೆ 10ರಿಂದ ಸಂಜೆ 4 ಘಂಟೆಯವರೆಗೆ (28-7-99).

   ಅಣುಸೋಣೆಯ ಹಂಸಾಶ್ರಮದಲ್ಲಿ ಪೂಜೆ, ಭಜನೆ, ಪ್ರವಚನ, ಧ್ಯಾನ, ಪ್ರಸಾದ ವಿನಿಯೋಗ ಹಾಗು ಪ್ರಶ್ನೋತ್ತರಗಳು. ಆಸಕ್ತರು ಹಂಸಾಶ್ರಮದ ವಿಳಾಸಕ್ಕೆ ಒಂದು ವಾರ ಮುಂಚಿತವಾಗಿ ತಿಳಿಸುವುದು.

CC-0. In Public Domain. Digitized by eGangotri

ಶ್ರೀ ಸದ್ಗುರುವಿಗೆ ನಮನ

– ಶ್ಯಾಮರಾವ್ ಗಾಯಕವಾಡ್

ಜೇಯ ಸದ್ಗುರುನಾಥ ।
ಕಾಯ ಪುಸಿಯನೆ ತೋರಿ ಶಿಷ್ಯಂಗೆ ।
ತಾಯಿ ತಂದ್ಯಾದ ಸರ್ವಜ್ಞ ॥

ಮಾತೆಯೂ ಪಿತನೂ ಆಗಿರುವ ಸದ್‌ಗುರುವಿಗೆ ಸ್ಮರಿಸಿ ನಮಸ್ಕರಿಸುತ್ತೇನೆ; ನಮಸ್ಕಾರಗಳು.

ನಮಸ್ಕಾರ ಎಂದರೆ ನಮಿಸುವ ಕಾರ್ಯ. ನಮಸ್ಕಾರ ಮಾಡಲು ನನಗೆ ಸಾಧ್ಯವಿದೆಯೇ ? ಎಂದು ಮೊದಲು ಚಿಂತಿಸುವವನಾಗಿ ನಮಸ್ಕಾರದ ಬಗ್ಗೆ ಆಲೋಚಿಸುತ್ತೇನೆ. ಆಲೋಚಿಸುತ್ತ ಕಂಡುಕೊಳ್ಳುತ್ತೇನೆ. ನಾನು ಸ್ಮರಿಸಬಹುದು. ಆದರೆ ನಮಸ್ಕಾರ ಮಾಡಲು ನಾನು ಯೋಗ್ಯನಾಗಿಲ್ಲ ಎಂದು ತಿಳಿದು "ಅನ್ಯಥಾ ಶರಣಂ ನಾಸ್ತಿ" ಎಂದು ಸದ್ಗುರುವಿಗೆ ಶರಣು ಹೋಗುತ್ತೇನೆ.

ಶ್ರೀ ಸದ್ಗುರುವಿಗೆ ಶರಣಾಗುತ್ತಾ ಮಾನಸಿಕವಾಗಿ ವಿಚಾರ ಮಾಡುತ್ತೇನೆ. ಏಕೆ ನಮಸ್ಕಾರ ಮಾಡಲಾಗುತ್ತಿಲ್ಲ ? ನಮಸ್ಕಾರ ಮಾಡಲು ಸಾಧ್ಯವೆ ? ಯಾವಾಗ ? ಹೇಗೆ ? ವಿಮರ್ಶಿಸುತ್ತಾ ಸದ್ಗುರುವಿಗೆ ಶರಣಾಗಿ ಶರಣಾದ ಭಾಗಗಳನ್ನು ಈ ಮುಂದೆ ನಿವೇದಿಸುತ್ತೇನೆ.

ಸತ್ ಚಿತ್ ಆನಂದ ನಿತ್ಯ ಪರಿಪೂರ್ಣ ಎಂಬುದಾಗಿ ಪಂಚಲಕ್ಷಣಗಳಿಂದೊಪ್ಪುವ ಅದ್ವಿತೀಯ ವಸ್ತು ಇರುವುದಾಗಿ ಸದ್ಗುರುವಾಕ್ಯವನ್ನು ಶ್ರವಣ ಮಾಡಿಸಿದ ಸದ್ಗುರುವಿಗೆ ಶರಣಾಗುತ್ತೇನೆ.

ಆ ಅದ್ವಿತೀಯ ವಸ್ತುವಿನಲ್ಲಿ

ಸತ್ ರೂಪಿನ ವಸ್ತುವನ್ನು ಹುಡುಕಿ ಅಸತ್‌ಗಳನ್ನೆಲ್ಲಾ ಕಳೆದುಹಾಕು ಎಂದು ನಾನಾ ಪರಿಯಾಗಿ ಸದ ಸದ್ವಿವೇಕವನ್ನು ಶ್ರವಣ ಮಾಡಿಸಿದ ಸದ್ಗುರುವಿಗೆ ಶರಣಾಗುತ್ತೇನೆ.

ಚಿತ್ ರೂಪಿನ ಸಿರಿಸಂಪತ್ತನ್ನು ಶ್ರವಣಮಾಡಿಸಿ ಅಚಿತ್ ಕಾನನವನ್ನು ದಹಿಸುವ ಪರಿಪರಿ ಮಾರ್ಗವನ್ನೂ ಶ್ರವಣ ಮಾಡಿಸಿ ಚಿದ ಚಿದ್ವಿವೇಕವನ್ನು ಪರಿಚಯಿಸಿದ ಸದ್ಗುರುವಿಗೆ ಶರಣಾಗುತ್ತೇನೆ.

CC-O. In Public Domain. Digitized by eGangotri

ಆನಂದರೂಪವನ್ನು ಪರಿಪರಿಯಾಗಿ ಶ್ರವಣ ಮಾಡಿಸಿ ಆನಂದಮಯವಾದುವುಗಳಲ್ಲಿ ಒಂದಕ್ಕೊಂದು ಮಿಗಿಲಾದ ಆನಂದ ಸಮೂಹಗಳಲ್ಲಿ ಪರಮಾನಂದ ಸ್ವರೂಪವನ್ನು ಶ್ರವಣ ಮಾಡಿಸಿದ ಸದ್ಗುರುವಿಗೆ ಶರಣಾಗುತುತೇನೆ.

ನಿತ್ಯ ಸ್ವರೂಪವನ್ನು ಪರಿಪರಿಯಾದ ರೀತಿಯಲ್ಲಿ ವಿಮರ್ಶಿಸಿ ನಿತ್ಯಾನಿತ್ಯ ವಸ್ತು ವಿವೇಕವನ್ನು ಶ್ರವಣ ಮಾಡಿಸಿದ ಸದ್ಗುರುವಿಗೆ ಶರಣಾಗುತ್ತೇನೆ.

ಪರಿಪೂರ್ಣ ಸ್ವರೂಪವನ್ನು ಹೃದ್ಗತವಾಗುವ ಹಾಗೆ ಸ್ಥೂಲ ಸೂಕ್ಷ್ಮ ಕಾರಣ ಮಹಾಕಾರಣಗಳಲ್ಲಿ ಸಹಜ ಸ್ಥಿತಿಯನ್ನು ವಿವರಿಸಿ ಶ್ರವಣ ಮಾಡಿಸಿದ ಸದ್ಗುರುವಿಗೆ ಶರಣಾಗುತ್ತೇನೆ.

ಶ್ರವಣ ಮಾಡಿಸಿದ ಸತ್ ಚಿತ್ ಆನಂದ ನಿತ್ಯ ಪರಿಪೂರ್ಣವಾದ ಅದ್ವಿತೀಯ ವಸ್ತುವನ್ನು ಕುರಿತು 'ಮನನ' ಮಾಡುತ್ತಿರು ಎಂದು ಬೋಧಿಸಿದ ಸದ್ಗುರುವಿಗೆ ಶರಣಾಗುತ್ತೇನೆ.

'ಶ್ರವಣ' 'ಮನನ' ನಿಧಿಧ್ಯಾಸನ'ಗಳು ಸಾಧ್ಯವಾಗಿ ಧ್ಯಾತೃ, ಧ್ಯಾನ, ಧ್ಯೇಯಗಳೆಂಬ ತ್ರಿಪುಟಿಗಳು ಒಂದಾಗುವಂತೆ ಅನುಭವಿಸು ಎಂದು ಪ್ರೇಮದಿಂದ ಬೋಧಿಸಿದ ಸದ್ಗುರುವಿಗೆ ಶರಣಾಗುತ್ತೇನೆ.

ಅದ್ವಿತೀಯ ವಸ್ತುವಿನಲ್ಲಿ ಐಕ್ಯವನ್ನು ಹೊಂದು ಎಂದು ಸದ್ಗುರುವು ಆಶೀರ್ವಾದ ಮಾಡುವಲ್ಲಿ ವಂದನೆ ಎಂದರೆ ನಮಸ್ಕಾರವನ್ನು ಮಾಡುತ್ತಾ 'ನಾನು' ಇಲ್ಲವಾಗುತ್ತೇನೆ.

ಶ್ರೀ ಸದ್ಗುರುವಿಗೆ ನಮಸ್ಕಾರ. ಅದ್ವಿತೀಯವಾದ ಸತ್ ಚಿತ್ ಆನಂದ ನಿತ್ಯ ಪರಿಪೂರ್ಣ ವಸ್ತುವಿಗೆ ನಮಸ್ಕಾರಗಳು. ನಮನಗಳು.

ಇಂತು ಶ್ರೀ ಸದ್ಗುರುವಿಗೆ ಶರಣುಗಳು ಮತ್ತು ನಮನಗಳು

(ಸಶೇಷ)

ನೀವು ಹಂಸಾಶ್ರಮದ ಸದಸ್ಯರಾಗಲು ಇಚ್ಛಿಸಿದಲ್ಲಿ, ಇಂದೇ ನಿಮ್ಮ ಚಂದಾ ಹಣವನ್ನು ಕಳುಹಿಸಿಕೊಡಿ.